KACD410005882023

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹೊಳಲ್ಕೆರೆ.**

**ಉಪಸ್ಥಿತರು**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

**ದಿನಾಂಕ 14 ನೇ ಜುಲೈ , 2026**

**ಎಂ.ಎ. ಸಂಖ್ಯೆ-7/2023**

ಮೇಲ್ಮನವಿದಾರರುಃ

1. ಗೋವಿಂದಪ್ಪ ಬಿನ್ ಲೇಟ್ ಕರಿಯಪ್ಪ,
ವಯಸ್ಸುಃ ಸುಮಾರು 72 ವರ್ಷ,
ಉದ್ಯೋಗಃ ವ್ಯವಸಾಯಗಾರರು,

2. ಶ್ರೀಮತಿ ರತ್ನಮ್ಮ
ಕೋಂ ಲೇಟ್ ಸೋಮಶೇಖರಪ್ಪ,
ವಯಸ್ಸುಃ ಸುಮಾರು 50 ವರ್ಷ,
ಉದ್ಯೋಗಃ ಗೃಹಿಣಿ,

3. ಚಿತ್ರಶೇಖರಪ್ಪ ಬಿನ್ ಲೇಟ್ ಕರಿಯಪ್ಪ,
ವಯಸ್ಸುಃ ಸುಮಾರು 52 ವರ್ಷ,
ಉದ್ಯೋಗಃ ವ್ಯವಸಾಯಗಾರರು,

4. ಉಮೇಶ್ ಬಿನ್ ಲೇಟ್ ಬಸಪ್ಪ,
ವಯಸ್ಸುಃ ಸುಮಾರು 50 ವರ್ಷ,
ಉದ್ಯೋಗಃ ವ್ಯವಸಾಯಗಾರರು,

ಎಲ್ಲರ ವಾಸಃ ತುಪ್ಪದಹಳ್ಳಿ ಗ್ರಾಮ,
ರಾಮಗಿರಿ ಹೋಬಳಿ, ಹೊಳಲ್ಕೆರೆ ತಾಲ್ಲೂಕು.

(ಪ್ರತಿನಿಧಿಸುವವರುಃ ಶ್ರೀ ಎಂ. ಶಿವಶಂಕರ, ನ್ಯಾಯವಾದಿಗಳು)

**- ವಿರುದ್ಧ -**

ಎದುರುದಾರರುಃ ಎಸ್.ಎಂ. ಮಲ್ಲೇಶಪ್ಪ
ಬಿನ್ ಲೇಟ್ ಮೂಡಲಗಿರಿಯಪ್ಪ,
ವಯಸ್ಸುಃ ಸುಮಾರು 68 ವರ್ಷ,
ಉದ್ಯೋಗಃ ವ್ಯವಸಾಯಗಾರರು,
ವಾಸಃ ತುಪ್ಪದಹಳ್ಳಿ ಗ್ರಾಮ, ರಾಮಗಿರಿ ಹೋಬಳಿ,
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

(ಪ್ರತಿನಿಧಿಸುವವರುಃ ಶ್ರೀ ಎನ್.ಹೆಚ್. ಶಾಂತವೀರಪ್ಪ, ನ್ಯಾಯವಾದಿಗಳು)

| | | | | |
|---|---|---|---|---|
| 1 | ಮೇಲ್ಮನವಿ ದಾಖಲಿಸಿದ ದಿನಾಂಕ | 01.06.2023 | | |
| 2 | ಮೇಲ್ಮನವಿ ಸ್ವರೂಪ | ವಿಚಾರಣಾ ನ್ಯಾಯಾಲಯವಾದ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳಲ್ಕೆರೆಯ ಅಸಲು ದಾವಾ ಸಂಖ್ಯೆ-280/2022 ರ ದಿನಾಂಕ 18.04.2023 ರ ಮಧ್ಯಂತರ ಅರ್ಜಿ ಸಂಖ್ಯೆ-1 ರ ಆದೇಶವನ್ನು ರದ್ದುಪಡಿಸಲು ಕೋರಿ ಸಲ್ಲಿಸಿದ ಮೇಲ್ಮನವಿ. | | |
| 3 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 14.07.2026 | | |
| 4 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | 03 | 01 | 13 |

**-:: ತೀರ್ಪು ::-**

ಈ ಮೇಲ್ಮನವಿದಾರರು ವಿಚಾರಣಾ ನ್ಯಾಯಾಲಯದಲ್ಲಿ ಪ್ರತಿವಾದಿಯರಾಗಿದ್ದು, ಪ್ರಸ್ತುತ ಈ ಸಂಕೀರ್ಣ ಮೇಲ್ಮನವಿಯನ್ನು ಹೊಳಲ್ಕೆರೆಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿನ ಅಸಲು ದಾವಾ ಸಂಖ್ಯೆ-280/2022 ರ ದಿನಾಂಕ 18.04.2023 ರಂದು ನೀಡಿರುವಂತಹ ಮಧ್ಯಂತರ ಅರ್ಜಿ ಸಂಖ್ಯೆ-1 ರ ಆದೇಶವನ್ನು ರದ್ದುಪಡಿಸಿ, ಪ್ರತಿವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸಿ, ಈ ಸಂಕೀರ್ಣ ಮೇಲ್ಮನವಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

2. ಪಕ್ಷಗಾರರು ವಿಚಾರಣಾ ನ್ಯಾಯಾಲಯದಲ್ಲಿ ಯಾವ ಶ್ರೇಯಾಂಕದಲ್ಲಿದ್ದರೋ, ಸ್ಪಷ್ಟತೆ ಮತ್ತು ಅನುಕೂಲಕ್ಕಾಗಿ ಅದೇ ಶ್ರೇಯಾಂಕದಲ್ಲಿ ಸದರಿರವರನ್ನು ಉಲ್ಲೇಖಿಸಲಾಗುತ್ತದೆ.

3. ವಾದಿಯರು ಪ್ರತಿವಾದಿಯರ ವಿರುದ್ದ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಘೋಷಣಾತ್ಮಕ ಪರಿಹಾರವನ್ನು ಮತ್ತು ಅದಕ್ಕೆ ಪೂರಕವಾಗಿ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಅದಕ್ಕೆ ಪ್ರತಿಯಾಗಿ ಪ್ರತಿವಾದಿಯರು ವಾದ ಪತ್ರದ ಅನುಸೂಚಿತ ಸ್ವತ್ತಿನ ಕುರಿತಾಗಿ ಪ್ರತಿ ಹಕ್ಕು ದಾವೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ಪ್ರತಿವಾದಿಯರು ಪ್ರತಿ ಹಕ್ಕು ದಾವೆಗೆ ಪೂರಕವಾಗಿ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಸಲ್ಲಿಸಿದ್ದು, ಸದರಿ ಅರ್ಜಿಗೆ ವಾದಿಯರ ಪರ ವಕೀಲರು ತಕರಾರನ್ನು ಸಲ್ಲಿಸಿರುತ್ತಾರೆ.

4. ಪ್ರತಿವಾದಿಯರು ಪ್ರಸ್ತುತ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿದ್ದು, ಅರ್ಜಿಗೆ ಪೂರಕವಾಗಿ ಸಲ್ಲಿಸಿರುವಂತಹ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ಪರಿಗಣಿಸಿ, ದಾವಾ ಅನುಸೂಚಿತ ಸ್ವತ್ತಿನ ಪ್ರತಿವಾದಿಯರ ಶಾಂತಿಯುತ

ಸ್ವಾಧೀನಾನುಭವಕ್ಕೆ ವಾದಿಯರಾಗಲೀ ಅಥವಾ ಅವರ ಸಹಚರರಾಗಲೀ ಇತರೆ ಯಾರೇ ಆಗಲಿ ತಕರಾರು ಮಾಡದಂತೆ, ದಾವೆಯ ಅಂತಿಮ ಆದೇಶದವರೆಗೂ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡಬೇಕೆಂದು ಕೋರಿರುತ್ತಾರೆ. ಉಭಯ ಪಕ್ಷಗಾರರ ವಾದ ಮಂಡನೆಯ ನಂತರದಲ್ಲಿ, ವಿಚಾರಣಾ ನ್ಯಾಯಾಲಯವು ಪ್ರತಿವಾದಿಯರು ಸಲ್ಲಿಸಿದ್ದಂತಹ ಮದ್ಯಂತರ ಅರ್ಜಿ ಸಂಖ್ಯೆ-1 ನ್ನು ತಿರಸ್ಕರಿಸಿರುತ್ತದೆ.

5. ಈ ಮೇಲ್ಕಂಡ ಮಧ್ಯಂತರ ಅರ್ಜಿ ಸಂಖ್ಯೆ-1 ರ ಆದೇಶದಿಂದ ಬಾಧಿತರಾದ ಪ್ರತಿವಾದಿಯರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 43 ನಿಯಮ 1 ರ ಅಡಿಯಲ್ಲಿ ಈ ಸಂಕೀರ್ಣ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಈ ಸಂಕೀರ್ಣ ಮೇಲ್ಮನವಿಯಲ್ಲಿ ಪ್ರತಿವಾದಿಯರು/ಮೇಲ್ಮನವಿದಾರರು ಈ ಕೆಳಕಂಡ ಸಂಗತಿಗಳು ಹಾಗೂ ನಿಲುವುಗಳನ್ನು ತೆಗೆದುಕೊಂಡಿದ್ದು, ಸದರಿ ನಿಲುವುಗಳು ಈ ಕೆಳಗಿನಂತಿವೆಃ-

ಮೇಲ್ಮನವಿದಾರರು ಪ್ರಸ್ತುತ ಈ ಮೇಲ್ಮನವಿಯನ್ನು ಎದುರುದಾರರ ವಿರುದ್ದ ಹೊಳಲ್ಕೆರೆಯ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದ ಅಸಲು ದಾವಾ ಸಂಖ್ಯೆ-280/2022 ರ ಮದ್ಯಂತರ ಅರ್ಜಿ ಸಂಖ್ಯೆ-1 ರ ಕುರಿತಾದ ದಿನಾಂಕ 18.04.2023 ರ ಆದೇಶದ ವಿರುದ್ದ ಸಲ್ಲಿಸಿರುತ್ತಾರೆ. ವಿಚಾರಣಾ ನ್ಯಾಯಾಲಯದ ಆದೇಶವು ವಾಸ್ತವಾಂಶದ ಅಡಿಯಲಾಗಲೀ ಮತ್ತು ಕಾನೂನಿನ ಅಂಶಗಳ ಅಡಿಯಲಾಗಲೀ ಊರ್ಜಿತವಾಗುವುದಿಲ್ಲ. ವಿಚಾರಣಾ ನ್ಯಾಯಾಲಯವು ಮೇಲ್ಮನವಿದಾರರ ನಿಲವುಗಳ ಕುರಿತಾಗಿ ಕಾನೂನಾತ್ಮಕ ಅಂಶಗಳನ್ನು ಮತ್ತು ವಾಸ್ತವಾಂಶದ ಅಂಶಗಳನ್ನು ಪರಾಮರ್ಶಿಸುವಲ್ಲಿ ವಿಫಲವಾಗಿರುತ್ತದೆ. ವಿಚಾರಣಾ ನ್ಯಾಯಾಲಯದ ಆದೇಶವು ಸ್ಥಾಪಿತ ಕಾನೂನಿನ ಅಂಶಗಳಿಗೆ ವ್ಯತಿರಿಕ್ತವಾಗಿದ್ದು, ದಾವೆಯ ಕುರಿತಾಗಿ ಸಾಂಭಾವ್ಯತೆಯ ಬಾಹುಳ್ಯತೆಯ ಆದಾರದಲ್ಲಿ ಪರಿಗಣಿಸಬಹುದಾದ ಅಂಶಗಳನ್ನು ಪರಾಮರ್ಶಿಸುವಲ್ಲಿ ವಿಫಲವಾಗಿರುತ್ತದೆ. ವಿಚಾರಣಾ ನ್ಯಾಯಾಲಯವು ನೀಡಿರುವಂತಹ ನಿರ್ಣಯವು ಕಲ್ಪನೆಯಿಂದ ಮತ್ತು ಊಹೆಗಳಿಂದ ಕೂಡಿರುತ್ತದೆ. ವಿಚಾರಣಾ ನ್ಯಾಯಾಲಯದ ಆದೇಶವು ಸೂಕ್ತ

ಸಕಾರಣಗಳಿಂದ ಕೂಡಿರುವಂತಹ ಅಂಶಗಳಿಂದ ರೂಪಿತವಾಗಿರುವುದಿಲ್ಲ. ವಿಚಾರಣಾ ನ್ಯಾಯಾಲಯದ ಆದೇಶವು ವಿಚಿತ್ರವಾದ, ಹಠಮಾರಿತನದಿಂದ ಕೂಡಿದ, ಕಾನೂನು ಬಾಹಿರವಾದ ಮತ್ತು ಸಮರ್ಥಿಸಲಾದಂತಹ ಅಂಶಗಳಿಂದ ಕೂಡಿರುತ್ತದೆ. ವಿಚಾರಣಾ ನ್ಯಾಯಾಲಯದ ಆದೇಶವು ನಿರಂಕುಶವಾದ ಅಂಶಗಳಿಂದ ಕೂಡಿದ್ದು, ವಿಚಾರಣಾ ನ್ಯಾಯಾಲಯದ ಕಾರಣಗಳು ಸಮರ್ಪಕ ಆಗಿರುವುದಿಲ್ಲ ಮತ್ತು ಸಕಾರಣಗಳಿಂದ ಕೂಡಿರುವುದಿಲ್ಲ. ವಿಚಾರಣಾ ನ್ಯಾಯಾಲಯವು ನೈಸರ್ಗಿಕ ನಿಯಮಕ್ಕೆ ಅನುಸಾರವಾಗಿ ಮತ್ತು ಸ್ಥಾಪಿತ ಕಾನೂನಿನ ನಿಲುವುಗಳಿಗೆ ವ್ಯತಿರಿಕ್ತವಾಗಿ ಆದೇಶವನ್ನು ನೀಡಿರುತ್ತದೆ. ವಿಚಾರಣಾ ನ್ಯಾಯಾಲಯವು ಮೇಲ್ಮನವಿದಾರರು ಸಲ್ಲಿಸಿರುವಂತಹ ದಾಖಲಾತಿಗಳ ಕುರಿತು ಪರಾಮರ್ಶಿಸುವಲ್ಲಿ ವಿಫಲವಾಗಿರುತ್ತದೆ. ವಿಚಾರಣಾ ನ್ಯಾಯಾಲಯವು ಅಂಶ ಸಂಖ್ಯೆ-1 ರಿಂದ 3 ರ ಕುರಿತು ತಪ್ಪಾಗಿ ನಕಾರಾತ್ಮಕವೆಂದು ನಿರ್ಣಯಿಸಿರುತ್ತದೆ. ವಿಚಾರಣಾ ನ್ಯಾಯಾಲಯವು ದಾವೆಯನ್ನು ಸಲ್ಲಿಸುವ ದಿನಾಂಕದಂದು ಮೇಲ್ಮನವಿ ದಾರರು ದಾವಾ ಸ್ವತ್ತಿನ ಕುರಿತಾಗಿ ಭೌತಿಕ ಸ್ವಾಧೀನಾನುಭವವನ್ನು ಹೊಂದಿದ್ದರು ಎಂಬುದರ ಕುರಿತು ಪರಾಮರ್ಶಿಸುವಲ್ಲಿ ವಿಫಲವಾಗಿರುತ್ತದೆ. 1 ಮತ್ತು 3 ನೇ ಪ್ರತಿವಾದಿಯರ ತಂದೆಯಾದ ಕರಿಯಪ್ಪ ಹಾಗೂ 4 ನೇ ಪ್ರತಿವಾದಿಯ ತಂದೆಯಾದ ಬಸಪ್ಪರವರು ದಿನಾಂಕ 28.02.1972 ರಂದು ಮಾಡಿಕೊಂಡಿದ್ದಂತಹ ನೋಂದಣಿ ವಿಭಾಗ ಪತ್ರದ ಕುರಿತು ನಿರ್ಣಯಿಸುವಲ್ಲಿ ವಿಚಾರಣಾ ನ್ಯಾಯಾಲಯವು ವಿಫಲವಾಗಿ ರುತ್ತದೆ. 1 ಮತ್ತು 3 ನೇ ಪ್ರತಿವಾದಿಯರ ತಂದೆಯಾದ ಕರಿಯಪ್ಪ ಹಾಗೂ 4 ನೇ ಪ್ರತಿವಾದಿಯ ತಂದೆಯಾದ ಬಸಪ್ಪರವರು ಮೃತಪಟ್ಟ ನಂತದರಲ್ಲಿ ಸದರಿ ನೋಂದಣಿ ವಿಭಾಗಪತ್ರದ ಪ್ರಕಾರ ದಾವಾ ಸ್ವತ್ತಿನ ಕುರಿತಾಗಿ ತಮ್ಮ ತಮ್ಮ ಹಿಸ್ಸೆಯ ಸ್ವತ್ತುಗಳ ಕುರಿತು ಸ್ವಾಧೀನಾನುಭವವನ್ನು ಹೊಂದಿರುವ ಬಗ್ಗೆ ನಿರ್ಣಯಿಸುವಲ್ಲಿ ವಿಚಾರಣಾ ನ್ಯಾಯಾಲಯವು ವಿಫಲವಾಗಿರುತ್ತದೆ. ಎದುರುದಾರರು ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿದ್ದು, ಹಾಗಾಗಿ ಸೃಷ್ಟಿತ ದಾಖಲಾತಿಗಳ ಕುರಿತು ಪರಾಮರ್ಶಿಸುವಲ್ಲಿ ವಿಚಾರಣಾ ನ್ಯಾಯಾಲಯವು ವಿಫಲವಾಗಿರುತ್ತದೆ. ಮೇಲ್ಮನವಿದಾರರಾದ ವಾದಿಯರು ಹಾಜರುಪಡಿಸಿದ್ದಂತಹ ದಿನಾಂಕ 04.03.1941

ರ ನೋಂದಣಿಯಾಗದ ವಿಭಾಗಪತ್ರವು ಸೃಷ್ಟಿತ ದಾಖಲಾತಿ ಎಂಬುದನ್ನು ಪರಾಮರ್ಶಿಸುವಲ್ಲಿ ವಿಚಾರಣಾ ನ್ಯಾಯಾಲಯವು ವಿಫಲವಾಗಿರುತ್ತದೆ. ಮೇಲ್ಮನವಿದಾರರ ಅಜ್ಜನಾದ ಸಿದ್ದಪ್ಪರವರ ಮರಣ ನಂತರದಲ್ಲಿ ಆತನ ಮಕ್ಕಳಾದ ಕರಿಯಪ್ಪ ಮತ್ತು ಬಸಪ್ಪರವರು ಒಟ್ಟು ಕುಟುಂಬದ ಸ್ವತ್ತುಗಳ ಕುರಿತಾಗಿ ದಿನಾಂಕ 28.07.1972 ರ ನೋಂದಣಿ ವಿಭಾಗಪತ್ರದಂತೆ ವಿಭಾಗವನ್ನು ಮಾಡಿಕೊಂಡಿರುತ್ತಾರೆ ಎಂಬುದನ್ನು ನಿರ್ಣಯಿಸುವಲ್ಲಿ ವಿಫಲವಾಗಿರುತ್ತದೆ. ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ 2021-22 ನೇ ಸಾಲಿನವರೆಗೆ ಖಾತೆಯು ಮೇಲ್ಮನವಿದಾರರ ಅಜ್ಜನಾದ ಸಿದ್ದಪ್ಪರವರ ಹೆಸರಿನಲ್ಲಿ ಇತ್ತು ಎಂಬುದರ ಕುರಿತು ಆನಂತರದಲ್ಲಿ ಮೇಲ್ಮನವಿದಾರರು ಉಪ ತಹಶೀಲ್ದಾರ್ ರಾಮಗಿರಿರವರಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ತದನಂತರದಲ್ಲಿ ದಾವಾ ಸ್ವತ್ತಿನ ಕುರಿತು ಸ್ಥಳ ಪರಿಶೀಲನೆ ಮಾಡಿ ಎಂ.ಆರ್.ಸಂಖ್ಯೆ-49/2021-22 ರಂತೆ ಮೇಲ್ಮನವಿದಾರರ ಹೆಸರಿಗೆ ಖಾತೆ ಮಾಡಿರುತ್ತಾರೆ ಎಂಬುದನ್ನು ಪರಿಗಣಿಸುವಲ್ಲಿ ವಿಫಲವಾಗಿರುತ್ತದೆ. ವಿಚಾರಣಾ ನ್ಯಾಯಾಲಯವು ಮೇಲ್ಮನವಿ ದಾರರು ಹಾಜರು ಪಡಿಸಿದ್ದಂತಹ ದಾಖಲಾತಿಗಳ ಕುರಿತು ಅಂಗೀಕರಿಸುವಲ್ಲಿ ವಿಫಲವಾಗಿರುತ್ತದೆ. ವಿಚಾರಣಾ ನ್ಯಾಯಾಲಯವು ಪ್ರತಿ ಹಕ್ಕು ದಾವೆಯ ಕುರಿತಾಗಿ ಮೇಲ್ಮನವಿದಾರರಾದ ಪ್ರತಿವಾದಿಯರು ತಮ್ಮ ಪರವಾಗಿ ಮೇಲ್ನೋಟಕ್ಕೆ ಸಾಭೀತು ಪಡಿಸಬಹುದಾದ ಪ್ರಕರಣವನ್ನು ಹೊಂದಿರುತ್ತಾರೆ ಎಂಬುದರ ಕುರಿತು, ತಮ್ಮ ಪರವಾಗಿ ಅನುಕೂಲತೆಯ ಒಲುಮೆಯನ್ನು ಹೊಂದಿರುತ್ತಾರೆ ಎಂಬುದರ ಕುರಿತು ನಿರ್ಣಯಿಸುವ ಬದಲಾಗಿ, ವ್ಯತಿರಿಕ್ತವಾಗಿ ನಿರ್ಣಯವನ್ನು ನೀಡಿರುತ್ತದೆ. ಮೇಲ್ಮನವಿ ದಾರರು ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಪ್ರತಿ ಹಕ್ಕು ದಾವೆಯ ಪರಿಹಾರವನ್ನು ಕೋರಿದ್ದು, ಆದಾಗ್ಯೂ ಸದರಿ ಅಂಶದ ಕುರಿತು ಪರಾಮರ್ಶಿಸುವಲ್ಲಿ ವಿಚಾರಣಾ ನ್ಯಾಯಾಲಯವು ವಿಫಲವಾಗಿರುತ್ತದೆ. ಆದ್ದರಿಂದ ಹೊಳಲ್ಕೆರೆಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿನ ಅಸಲು ದಾವಾ ಸಂಖ್ಯೆ-280/2022 ರ ದಿನಾಂಕ 18.04.2023 ರ ಮಧ್ಯಂತರ ಅರ್ಜಿ ಸಂಖ್ಯೆ-1 ರ ಆದೇಶವನ್ನು ರದ್ದು

ಗೊಳಿಸಿ, ಪ್ರತಿವಾದಿಯರು/ಮೇಲ್ಮನವಿದಾರರು ಸಲ್ಲಿಸಿರುವಂತಹ ಸಲ್ಲಿಸಿರುವಂತಹ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿ ಕೊಂಡಿರುತ್ತಾರೆ.

6. ಈ ಮೇಲ್ಮನವಿಯನ್ನು ಸಲ್ಲಿಸಿದ ನಂತರ ಎದುರುದಾರರಿಗೆ ನೋಟೀಸನ್ನು ನೀಡಿದ್ದು, ಎದುರುದಾರರು ತಮ್ಮ ವಕೀಲರ ಮೂಲಕ ಹಾಜರಾಗಿರುತ್ತಾರೆ.

7. ಈ ಮೇಲ್ಕಂಡಂತೆ ಮೇಲ್ಮನವಿದಾರರ ಹೇಳಿಕೆಯ ನಂತರದಲ್ಲಿ, ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು. ಈ ಪ್ರಕರಣವನ್ನು ಅಂತಿಮ ವಾಗಿ ತೀರ್ಮಾನಕ್ಕೆ ಕೈಗೆತ್ತಿಗೊಂಡಿದೆ.

8. ಈ ಮೇಲ್ಕಂಡ ಸಂಕೀರ್ಣ ಮೇಲ್ಮನವಿಯಲ್ಲಿನ ಅಂಶಗಳನ್ನು ಪರಿಶೀಲಿಸ ಲಾಗಿ, ಈ ಸಂಕೀರ್ಣ ಮೇಲ್ಮನವಿಯನ್ನು ತೀರ್ಮಾನಿಸಬೇಕಾದ ಅಂಶಗಳು ಈ ಕೆಳಗಿನಂತಿವೆ:-

1. ವಿಚಾರಣಾ ನ್ಯಾಯಾಲಯದ ಆದೇಶವನ್ನು ಪರಿಶೀಲಿಸಲಾಗಿ, ವಿಚಾರಣಾ ನ್ಯಾಯಾಲಯದ ಆದೇಶವು ವಿಚಿತ್ರವಾದ, ಹಠಮಾರಿತನದಿಂದ ಕೂಡಿದ, ಕಾನೂನು ಬಾಹಿರವಾದ, ಸಮರ್ಥಿಸಲಾದಂತಹ ಅಂಶಗಳಿಂದ ಮತ್ತು ನಿರಂಕುಶವಾದ ಅಂಶಗಳಿಂದ ಕೂಡಿರುತ್ತದೆ ಎಂಬುದು ಕಂಡುಬರುತ್ತದೆಯೆ?
2. ವಿಚಾರಣಾ ನ್ಯಾಯಾಲಯದ ಅಸಲು ದಾವಾ ಸಂಖ್ಯೆ-280/2022 ರ ಮಧ್ಯಂತರ ಅರ್ಜಿ ಸಂಖ್ಯೆ-1 ರ ದಿನಾಂಕ 18.04.2023 ರ ಆದೇಶವನ್ನು ರದ್ದುಪಡಿಸಿ, ಪ್ರತಿವಾದಿಯರು ಸಲ್ಲಿಸಿರುವಂತಹ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸಬೇಕೆಂದು ಮೇಲ್ಮನವಿ ದಾರರು ರುಜುವಾತುಪಡಿಸುವರೆ?
3. ಯಾವ ಆದೇಶ?

9. ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಗಿನಂತೆ ಉತ್ತರಿಸುತ್ತಿದ್ದೇನೆ:-

ಅಂಶ ಸಂಖ್ಯೆ-1 : ನಕಾರಾತ್ಮಕವಾಗಿ,
ಅಂಶ ಸಂಖ್ಯೆ-2 : ನಕಾರಾತ್ಮಕವಾಗಿ,
ಅಂಶ ಸಂಖ್ಯೆ-3 : ಅಂತಿಮ ಆದೇಶದಂತೆ.

## ಕಾ ರ ಣ ಗ ಳು

**10. ಅಂಶ ಸಂಖ್ಯೆ-1 ಮತ್ತು 2 :-** ಈ ಎರಡು ಅಂಶಗಳ ಕುರಿತಾಗಿ ರುಜುವಾತುಪಡಿಸುವಂತಹ ಹೊಣೆಗಾರಿಕೆ ಮೇಲ್ಮನವಿದಾರರದ್ದಾಗಿದ್ದು, ಈ ಕುರಿತು ಪ್ರಾರಂಭಿಕ ಹಂತದಲ್ಲಿ ಮೇಲ್ಮನವಿದಾರರು ಸಲ್ಲಿಸಿರುವ ಮೇಲ್ಮನವಿಯನ್ನು ಹಾಗೂ ವಿಚಾರಣಾ ನ್ಯಾಯಾಲಯದ ಮಧ್ಯಂತರ ಅರ್ಜಿ ಸಂಖ್ಯೆ-1 ರ ಆದೇಶವನ್ನು ಕೂಲಂಕುಷವಾಗಿ ಪರಿಶೀಲಿಸಲಾಗುತ್ತದೆ. ಪ್ರಸ್ತುತ ಈ ಮೇಲ್ಮನವಿಯಲ್ಲಿ ವಿಚಾರಣಾ ನ್ಯಾಯಾಲಯದ ಮಧ್ಯಂತರ ಅರ್ಜಿ ಸಂಖ್ಯೆ-1 ರ ಆದೇಶವನ್ನು ರದ್ದುಪಡಿಸಿ, ಪ್ರತಿವಾದಿಯರು ಸಲ್ಲಿಸಿರುವಂತಹ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸ ಬೇಕೆಂದು ಕೋರಿರುತ್ತಾರೆ.

11. ಪ್ರತಿವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-1 ರಲ್ಲಿನ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-

ಪ್ರತಿವಾದಿಯರು ದಾವಾ ಅನುಸೂಚಿತ ಸ್ವತ್ತಿನ ಮಾಲೀಕರು ಮತ್ತು ಹಕ್ಕುದಾರ ರಾಗಿ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ದಾವಾ ಅನುಸೂಚಿತ ಸ್ವತ್ತನ್ನು 1 ಮತ್ತು 3 ನೇ ಪ್ರತಿವಾದಿಯರ ತಂದೆಯಾದ ಮೃತ ಕರಿಯಪ್ಪ ಮತ್ತು 4 ನೇ ಪ್ರತಿವಾದಿಯ ತಂದೆಯಾದ ಮೃತ ಬಸಪ್ಪರವರು ದಿನಾಂಕ 28.02.1972 ರಂದು ತಮ್ಮಗಳ ಕುಟುಂಬಕ್ಕೆ ಸೇರಿದ ಚರ ಮತ್ತು ಸ್ಥಿರ ಆಸ್ತಿಗಳನ್ನು ನೋಂದಣಿ ವಿಭಾಗದ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗದಂತೆ ದಾವಾ ಅನುಸೂಚಿತ ಸ್ವತ್ತಿನ ಪೂರ್ವ ದಿಕ್ಕಿನ ಅರ್ಧ ಭಾಗ ಜಮೀನು 4 ನೇ ಪ್ರತಿವಾದಿಯ ತಂದೆಯಾದ ಮೃತ ಬಸಪ್ಪರವರ ಹಿಸ್ಸೆಗೆ ಬಂದಿದ್ದು, ಪಶ್ಚಿಮ ಭಾಗದ ಅರ್ಧ ಭಾಗದ ಜಮೀನು 1

ಮತ್ತು 3 ನೇ ಪ್ರತಿವಾದಿಯರ ತಂದೆಯಾದ ಮೃತ ಕರಿಯಪ್ಪರವರ ಹಿಸ್ಸೆಗೆ ಬಂದಿರುತ್ತದೆ. ಸದರಿ ಪಾಲು ವಿಭಾಗದಂತೆ 1 ಮತ್ತು 3 ನೇ ಪ್ರತಿವಾದಿಯರ ತಂದೆ ಹಾಗೂ 4 ನೇ ಪ್ರತಿವಾದಿಯ ತಂದೆ ತಮ್ಮ ಹಿಸ್ಸೆಗೆ ಬಂದತಂತಹ ಸ್ವತ್ತಿನ ಕುರಿತು ಯಾವುದೇ ಅಡ್ಡಿ-ಆತಂಕ ಇಲ್ಲದೆ ಸ್ವಾಧೀನಾನುಭವವನ್ನು ಹೊಂದಿ ಮೃತಪಟ್ಟಿರುತ್ತಾರೆ. 4 ನೇ ಪ್ರತಿವಾದಿಯ ತಂದೆಯಾದ ಬಸಪ್ಪರವರು ತಮ್ಮ ಜೀವಿತ ಅವಧಿಯಲ್ಲಿ ತನ್ನ ಮಕ್ಕಳೊಂದಿಗೆ ಪೂರ್ವ ದಿಕ್ಕಿನ ಅರ್ಧ ಹಿಸ್ಸೆಯ ಸ್ವತ್ತಿನಲ್ಲಿ ಯಾವುದೇ ಆತಂಕ ಇಲ್ಲದೆ ಸ್ವಾಧೀನಾನುಭವವನ್ನು ಹೊಂದಿ ಮೃತಪಟ್ಟಿದ್ದು, ಆನಂತದರಲ್ಲಿ 4 ನೇ ಪ್ರತಿವಾದಿಯು ತನ್ನ ತಂದೆಯ ಹಿಸ್ಸೆಯ ಸ್ವತ್ತನ್ನು ಯಾವುದೇ ಅಡ್ಡಿ-ಆತಂಕ ಇಲ್ಲದೆ ಮಾಲೀಕರಾಗಿ ಸ್ವಾಧೀನಾನುಭವವನ್ನು ಹೊಂದಿದ್ದು, ಸರ್ಕಾರಕ್ಕೆ ಕಂದಾಯವನ್ನು ಸಹ ಪಾವತಿಸಿರುತ್ತಾರೆ. ಅದೇ ರೀತಿಯಾಗಿ 1 ಮತ್ತು 3 ನೇ ಪ್ರತಿವಾದಿಯರ ತಂದೆಯ ಹಿಸ್ಸೆಯ ಸ್ವತ್ತಾದ ದಾವಾ ಸ್ವತ್ತಿನ ಪಶ್ಚಿಮ ಭಾಗದ ಅರ್ಧ ಭಾಗದ ಸ್ವತ್ತಿನ ಕುರಿತು ತನ್ನ ಜೀವಿತ ಅವಧಿಯಲ್ಲಿ, ತನ್ನ ಮಕ್ಕಳೊಂದಿಗೆ ಸ್ವಾಧೀನಾನುಭವವನ್ನು ಹೊಂದಿದ್ದು, ಆನಂತರದಲ್ಲಿ 1 ಮತ್ತು 3 ನೇ ಪ್ರತಿವಾದಿಯರು ಅಡ್ಡಿ-ಆತಂಕ ಇಲ್ಲದೆ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. 2 ನೇ ಪ್ರತಿವಾದಿಯ ಪತಿಯಾದ ಸೋಮಶೇಖರಪ್ಪರವರು ತಮ್ಮ ಜೀವಿತ ಅವಧಿಯಲ್ಲಿ 1 ಮತ್ತು 3 ನೇ ಪ್ರತಿವಾದಿಯರೊಂದಿಗೆ ಸ್ವಾಧೀನಾನುಭವವನ್ನು ಹೊಂದಿದ್ದು, ಆತನ ಮರಣಾ ನಂತರದಲ್ಲಿ 2 ನೇ ಪ್ರತಿವಾದಿ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. 1 ಮತ್ತು 3 ನೇ ಪ್ರತಿವಾದಿಯರು ದಾವಾ ಸ್ವತ್ತಿನ ಮಾಲೀಕರಾಗಿ ಸ್ವಾಧೀನಾನುಭವವನ್ನು ಹೊಂದಿದ್ದು, ಸರ್ಕಾರಕ್ಕೆ ಕಂದಾಯವನ್ನು ಸಹ ಪಾವತಿಸುತ್ತಿದ್ದಾರೆ. ದಾವಾ ಅನುಸೂಚಿತ ಸ್ವತ್ತಿನ ಕುರಿತು ಪ್ರತಿವಾದಿಯರ ತಂದೆಯಾದ ಕರಿಯಪ್ಪ ಮತ್ತು ಬಸಪ್ಪರವರು ಕ್ರಮವಾಗಿ ಸ್ವಾಧೀನಾನುಭವವನ್ನು ಹೊಂದಿದ್ದು, ಆನಂತರದಲ್ಲಿ ದಿನಾಂಕ 28.02.1972 ರಂದು ನೋಂದಣಿ ಪಾಲು ವಿಭಾಗವನ್ನು ಮಾಡಿಕೊಂಡು ಅನುಭವಿಸಿಕೊಂಡು ಬರುತ್ತಿದ್ದಾರೆ. ಸದರಿ ನೋಂದಣಿ ಪಾಲು ವಿಭಾಗದ ಕುರಿತು ವಾದಿಯರ ತಂದೆ ಆತನ ಜೀವಿತ ಅವಧಿಯಲ್ಲಿ ಪ್ರಶ್ನಿಸಿರುವುದಿಲ್ಲ. ಸದರಿ ನೋಂದಣಿ ಪಾಲುವಿಭಾಗ ಏರ್ಪಟ್ಟು ಸುಮಾರು 50 ವರ್ಷಗಳಾಗಿರುತ್ತದೆ. ಪ್ರತಿವಾದಿಯರ

ತಂದೆಯರು, ಆನಂತದರಲ್ಲಿ ಪ್ರತಿವಾದಿಯರು 30 ವರ್ಷಕ್ಕೂ ಮೇಲ್ಪಟ್ಟು ದಾವಾ ಅನುಸೂಚಿತ ಸ್ವತ್ತನ್ನು ಅನುಭವಿಸಿಕೊಂಡು ಬಂದಿದ್ದು, ಹಾಗಾಗಿ ದಾವಾ ಅನುಸೂಚಿತ ಸ್ವತ್ತಿನ ಕುರಿತು ವಾದಿಯರಿಗೆ ಯಾವುದೆ ಹಕ್ಕು ಇರುವುದಿಲ್ಲ. ದಾವಾ ಅನುಸೂಚಿತ ಸ್ವತ್ತಿನ ಕುರಿತು ವಿಭಾಗ ಏರ್ಪಟ್ಟಿದ್ದಾಗೂ ಆಕಸ್ಮಿಕವಾಗಿ ಖಾತೆಯು ಪ್ರತಿವಾದಿಯರ ಅಜ್ಜನಾದ ಸಿದ್ದಪರವರ ಹೆಸರಿನಲ್ಲಿ ಮುಂದುವರೆದಿರುತ್ತದೆ. ಆನಂತರದಲ್ಲಿ ಕಂದಾಯ ಅಧಿಕಾರಿಗಳು ಎಂ.ಆರ್.ಹೆಚ್-49/2021-22 ರ ಆದೇಶದಂತೆ ಪ್ರತಿವಾದಿಯರ ಹೆಸರಿಗೆ ಖಾತೆ ಮಾಡಿರುತ್ತಾರೆ. ದಾವಾ ಸ್ವತ್ತಿನ ಕುರಿತು ಖಾತೆಯು ಜಂಟಿ ಹೆಸರಿನಲ್ಲಿ ನಮೂದು ಇದ್ದಾಗ್ಯೂ, ಪ್ರತಿವಾದಿಯರು ಸದರಿರವರ ತಂದೆಯ ಹಿಸ್ಸೆಯಂತೆ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ಪ್ರತಿವಾದಿಯರ ದಾವಾ ಅನುಸೂಚಿತ ಸ್ವತ್ತಿನ ಸ್ವಾಧೀನತೆಗೆ ಯಾವುದೇ ತಕರಾರು ಇರುವುದಿಲ್ಲ. ದಾವಾ ಅನುಸೂಚಿತ ಸ್ವತ್ತಿಗೂ ಮತ್ತು ವಾದಿಯರಿಗೂ ಯಾವುದೆ ಸಂಬಂಧ ಇರುವುದಿಲ್ಲ. ಆದಾಗ್ಯೂ ವಾದಿಯರು ದಿನಾಂಕ 04.03.1941 ರಂದು ಸಣ್ಣಪ್ಪನ ಮಕ್ಕಳಾದ ಸಿದ್ದಪ್ಪ ಮತ್ತು ಮೂಡಲಗಿರಿಯಪ್ಪರವರ ನಡುವೆ ವಿಭಾಗ ಏರ್ಪಟ್ಟಿರುತ್ತದೆ ಎಂದು, ದಿನಾಂಕ 04.03.1941 ರ ನೋಂದಣಿಯಾಗದ ಪಾಲು ವಿಭಾಗಪತ್ರವನ್ನು ಸೃಷ್ಟನೆ ಮಾಡಿಕೊಂಡು ಹಾಜರುಪಡಿಸಿರುತ್ತಾರೆ. ವಾದಿಯರು ಸಲ್ಲಿಸಿರುವಂತಹ ದಾವೆಯು ಕಾಲಪರಿಮಿತಿಯನ್ನು ಮೀರಿರುತ್ತದೆ. ಪ್ರಸ್ತುತ ಈ ದಾವೆಯಲ್ಲಿ ಪ್ರತಿವಾದಿಯರು ತಮ್ಮ ಪರವಾಗಿ ಮೇಲ್ನೋಟಕ್ಕೆ ಸಾಭೀತು ಪಡಿಸಬಹುದಾದ ಪ್ರಕರಣವನ್ನು ಹೊಂದಿದ್ದು, ಅನುಕೂಲತೆಯ ಒಲುಮೆಯು ಸಹ ಪ್ರತಿವಾದಿಯರ ಪರವಾಗಿ ಇರುತ್ತದೆ. ಒಂದೊಮ್ಮೆ ಪ್ರಸ್ತುತ ಈ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ, ಪ್ರತಿವಾದಿಯರಿಗೆ ತುಂಬಲಾರದ ಹಾನಿ ಉಂಟಾಗುತ್ತದೆ. ಅಂತೆಯೇ ಸದರಿ ಹಾನಿಯನ್ನು ಇತರೆ ಯಾವುದೇ ರೀತಿಯಲ್ಲೂ ಬರಿಸಲು ಆಗುವುದಿಲ್ಲ. ಆದ್ದರಿಂದ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಪ್ರತಿವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

12. ವಾದಿಯರ ಪರ ವಕೀಲರು ಸಲ್ಲಿಸಿರುವ ತಕರಾರಿನಲ್ಲಿನ ಅಂಶಗಳು ಈ ಕೆಳಕಂಡತೆ ಇವೆಃ-

ವಾದಿಯರು ಮತ್ತು ಪ್ರತಿವಾದಿಯರ ಮನೆತನದ ಮೂಲ ಪುರುಷ ಸಣ್ಣಪ್ಪ ಯಾನೆ ಸಂಣಪ್ಪ ಆಗಿದ್ದು, ಸದರಿರವರಿಗೆ ಸಿದ್ದಪ್ಪ ಮತ್ತು ಮೂಡಲಗಿರಿಯಪ್ಪ ಎಂಬ ಇಬ್ಬರು ಮಕ್ಕಳಿದ್ದು, ಸದರಿರವರಲ್ಲಿ 1 ನೇ ಮಗನಾದ ಸಿದ್ದಪ್ಪರವರು, ಕರಿಯಮ್ಮ ಎಂಬುವವರನ್ನು ವಿವಾಹವಾಗಿದ್ದು, ಸದರಿ ದಂಪತಿಗೆ ಕರಿಯಪ್ಪ ಮತ್ತು ಬಸಪ್ಪ ಎಂಬ ಮಕ್ಕಳಿದ್ದರು. ಸದರಿ ಸಿದ್ದಪ್ಪ ಮತ್ತು ಕರಿಯಮ್ಮ ದಂಪತಿಯ ಇಬ್ಬರು ಮಕ್ಕಳಾದ ಕರಿಯಪ್ಪ ಮತ್ತು ಬಸಪ್ಪರವರು ಮೃತಪಟ್ಟಿದ್ದು, ಸದರಿರವರ ವಾರಸುದಾರರಾದ ಗೋವಿಂದಪ್ಪ ಬಿನ್ ಕರಿಯಪ್ಪ, ರತ್ನಮ್ಮ ಕೋಂ ಸೋಮಶೇಖರಪ್ಪ, ಚಿತ್ರಶೇಖರಪ್ಪ ಬಿನ್ ಕರಿಯಪ್ಪ ಮತ್ತು ಉಮೇಶ ಬಿನ್ ಬಸಪ್ಪರವರು ಜೀವಂತವಿದ್ದು, ಈ ದಾವೆಯ ಪ್ರತಿವಾದಿಯರಾಗಿರುತ್ತಾರೆ. ಅಂತೆಯೆ ಮತೋರ್ವ ಮಗನಾದ ಮೂಡಲಗಿರಿಯಪ್ಪ ರವರು ಗಂಗಮ್ಮ ಎಂಬುವವರನ್ನು ವಿವಾಹವಾಗಿದ್ದು, ಸದರಿ ದಂಪತಿಗೆ 1 ನೇ ಮಗನಾದ ಎಂ.ಎಸ್. ತಿಮ್ಮಯ್ಯರವರು ಇದ್ದು, ಸದರಿರವರು ಮೃತಪಟ್ಟಿದ್ದು, ಆತನ ಮಕ್ಕಳಾದ ಪ್ರೇಮ, ಯೋಗೇಶ, ಶಾರದಮ್ಮ, ಸವಿತ ಮತ್ತು ರೇಣುಕಾರವರು ಜೀವಂತ ಇದ್ದಾರೆ. ಅಂತೆಯೇ 2 ನೇ ಮಗನಾದ ಸಣ್ಣಪ್ಪ ಮತ್ತು 3 ನೇ ಮಗನಾದ ಮಲ್ಲೇಶಪ್ಪ , 4 ನೇ ಮಗನಾದ ಓಂಕಾರಪ್ಪ, 5 ನೇ ಮಗನಾದ ಎಸ್.ಎಂ. ರುದ್ರಪ್ಪ, 6 ನೇ ಮಗನಾದ ಎಸ್.ಎಂ. ಕುಬೇರಪ್ಪರವರು ಜೀವಂತವಿದ್ದು, ಈ ದಾವೆಯ ವಾದಿಯರಾಗಿರುತ್ತಾರೆ. ಅಂತೆಯೆ 7 ನೇ ಮಗಳಾದ ಲಕ್ಷ್ಮಮ್ಮರವರನ್ನು ಚನ್ನಗಿರಿ ತಾಲ್ಲೂಕಿನ, ಹೊನ್ನನಾಯಕನ ಹಳ್ಳಿ ಗ್ರಾಮಕ್ಕೆ ಕೊಟ್ಟು ವಿವಾಹ ಮಾಡಿದ್ದು, ಆಕೆಯ ಪತಿಯೊಂದಿಗೆ ವಾಸಿಸುತ್ತಿದ್ದಾರೆ. ವಾದಿಯಾದ ಎಂ.ಎಸ್. ಮಲ್ಲೇಶಪ್ಪರವರಿಗೆ ಮೂಡಲಗಿರಿಯಪ್ಪ ಮತ್ತು ಗಂಗಮ್ಮ ರವರ ಮಕ್ಕಳು ಹಾಗೂ ಸದರಿರವರ ವಾರಸುದಾರರು ಈ ದಾವೆಯನ್ನು ನಡೆಸಲು ಮೌಖಿಕವಾಗಿ ಒಪ್ಪಿಗೆಯನ್ನು ನೀಡಿದ್ದು, ಹಾಗಾಗಿ ಎಲ್ಲರ ಒಪ್ಪಿಗೆ ಮೇರೆಗೆ, ಎಸ್.ಎಂ. ಮಲ್ಲೇಶಪ್ಪರವರು ಈ ದಾವೆಯನ್ನು ಸಲ್ಲಿಸಿರುತ್ತಾರೆ. ದಾವಾ ಅನುಸೂಚಿತ ಸ್ವತ್ತಾದ ಹೊಳಲ್ಕೆರೆ ತಾಲ್ಲೂಕು, ರಾಮಗಿರಿ ಹೋಬಳಿ, ತುಪ್ಪದಹಳ್ಳಿ ಗ್ರಾಮದ ಸರ್ವೆ

ನಂಃ110/5 ರ ಜಮೀನು ಮೂಲತಃ ವಾದಿಯರು ಮತ್ತು ಪ್ರತಿವಾದಿಯರ ಮನೆತನಕ್ಕೆ ಸೇರಿದ ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತ ಸ್ವತ್ತಾಗಿತ್ತು. ದಿನಾಂಕ 04.03.1941 ರ ಜುಭಾನಿ ಪಾಲು ವಿಭಾಗದಂತೆ ಸದರಿ ಸ್ವತ್ತು ವಾದಿಯರ ತಂದೆಯಾದ ಮೂಡಲ ಗಿರಿಯಪ್ಪರವರ ಹಿಸ್ಸೆಗೆ ಬಂದಿರುತ್ತದೆ. ದಿನಾಂಕ 04.03.1941 ರಿಂದ ವಾದಿಯರ ತಂದೆ ದಾವಾ ಅನುಸೂಚಿತ ಸ್ವತ್ತನ್ನು ತನ್ನ ಪತ್ನಿ ಹಾಗೂ ಮಕ್ಕಳೊಂದಿಗೆ ಯಾವುದೇ ತಕರಾರು ಇಲ್ಲದೆ ಅನುಭವಿಸಿಕೊಂಡು ಬಂದಿದ್ದು, 1982 ರಲ್ಲಿ ವಾದಿಯರ ತಂದೆ ದಾವಾ ಅನುಸೂಚಿತ ಸ್ವತ್ತನ್ನು ಮತ್ತು ಪತ್ನಿ ಹಾಗೂ ಮಕ್ಕಳನ್ನು ಬಿಟ್ಟು ಮೃತಪಟ್ಟಿರುತ್ತಾರೆ. ವಾದಿಯರ ತಂದೆಯ ಮರಣಾ ನಂತರದಲ್ಲಿ ಮೂಡಲಗಿರಿಯಪ್ಪ ರವರ ಎಲ್ಲಾ ಮಕ್ಕಳು ದಾವಾ ಅನುಸೂಚಿತ ಸ್ವತ್ತನ್ನು ಯಾವುದೇ ತಕರಾರು ಇಲ್ಲದೆ ಇಲ್ಲಿಯವರೆಗೂ ಅನುಭವಿಸಿಕೊಂಡು ಬರುತ್ತಿದ್ದಾರೆ. ಆದಾಗ್ಯೂ ದಾವಾ ಸ್ವತ್ತಿನ ಖಾತೆಯು ವಾದಿಯರ ತಂದೆಯಾದ ಮೂಡಲಗಿರಿಯಪ್ಪರವರ ಅಣ್ಣನಾದ ಸಿದ್ದಪ್ಪ ಬಿನ್ ಸಣ್ಣಪ್ಪರವರ ಹೆಸರಿನಲ್ಲಿ ಮುಂದುವರೆದುಕೊಂಡು ಬಂದಿರುತ್ತದೆ. ಆದಾಗ್ಯೂ ಸದರಿ ಖಾತೆಯು ಸಿದ್ದಪ್ಪ ಬಿನ್ ಸಣ್ಣಪ್ಪರವರ ಹೆಸರಿನಲ್ಲಿ ಇರುವುದರಿಂದ ವಾದಿಯರ ದಾವಾ ಸ್ವತ್ತಿನ ಕುರಿತಾದ ಹಕ್ಕು, ಅಧಿಕಾರ, ಮಾಲೀಕತ್ವ ಮತ್ತು ಸ್ವಾಧೀನತೆಗೆ ಯಾವುದೆ ರೀತಿಯಲ್ಲಿಯೂ ಬಂಧನಕಾರಿಯಾಗುವುದಿಲ್ಲ. ಪ್ರತಿವಾದಿಯರ ತಂದೆ ಸಿದ್ದಪ್ಪ ಬಿನ್ ಸಣ್ಣಪ್ಪರವರು ಸುಮಾರು 50-60 ವರ್ಷಗಳ ಹಿಂದೆಯೇ ಮೃತಪಟ್ಟಿದ್ದಾಗ್ಯೂ 1983 ರಲ್ಲಿ ಮೃತಪಟ್ಟಿರುವುದಾಗಿ ಮರಣ ಪ್ರಮಾಣಪತ್ರವನ್ನು ಸೃಷ್ಟಿಸಿಕೊಂಡು ವಾದಿಯರು ಮತ್ತು ಮೂಡಲಗಿರಿಯಪ್ಪರವರ ವಾರಸುದಾರರಿಗೆ ತಿಳಿಯದಂತೆ, ಇತ್ತೀಚೆಗೆ ಕಂದಾಯ ಅಧಿಕಾರಿಗಳೊಂದಿಗೆ ಷರೀಕಾಗಿ ಪೌತಿ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ. ಆದಾಗ್ಯೂ ಸದರಿ ಪೌತಿ ಖಾತೆಯು ವಾದಿಯರ ಹಕ್ಕು, ಮಾಲೀಕತ್ವ ಮತ್ತು ಸ್ವಾಧೀನತೆಗೆ ಯಾವುದೇ ರೀತಿಯಲ್ಲಿಯೂ ಬಂಧನಕಾರಿ ಯಾಗುವುದಿಲ್ಲ. ಸಣ್ಣಪ್ಪ ಯಾನೆ ಸಂಣಪ್ಪರವರ ಮಕ್ಕಳಾದ ಸಿದ್ದಪ್ಪ ಹಾಗೂ ಮೂಡಲ ಗಿರಿಯಪ್ಪರವರು ದಿನಾಂಕ 04.03.1941 ರಂದು ವಿಭಾಗ ಮಾಡಿಕೊಂಡಿದ್ದು, ಆ ಪ್ರಕಾರವಾಗಿ ಸಿದ್ದಪ್ಪರವರು ಆತನ ಪಾಲಿನ ಹಿಸ್ಸೆಯ ಕುರಿತಾಗಿ ತನ್ನ ಪತ್ನಿ ಹಾಗೂ

ಮಕ್ಕಳೊಂದಿಗೆ ಅನುಭವಿಸಿಕೊಂಡು ಬಂದಿದ್ದು, ಆತನ ಮರಣಾ ನಂತದರಲ್ಲಿ ಮಕ್ಕಳು ಮತ್ತು ವಾರಸುದಾರರು ಅನುಭವಿಸಿಕೊಂಡು ಬರುತ್ತಿದ್ದಾರೆ. ಸಿದ್ದಪ್ಪರವರ ಹಿಸ್ಸೆಯ ಸ್ವತ್ತುಗಳ ಕುರಿತು ಆತನ ಮಕ್ಕಳು ಕೆಲವು ಸ್ವತ್ತುಗಳನ್ನು ಮಾರಾಟ ಮಾಡಿದ್ದು, ಇತರೇ ಸ್ವತ್ತುಗಳನ್ನು ಅಭಿವೃದ್ದಿಪಡಿಸಿಕೊಂಡು ಅನುಭವಿಸಿ ಕೊಂಡು ಬರುತ್ತಿದ್ದಾರೆ. ಸಿದ್ದಪ್ಪರ ವರ ಹಿಸ್ಸೆಯ ಸ್ವತ್ತುಗಳ ಕುರಿತಾಗಿ ಮೂಡಲಗಿರಿ ಯಪ್ಪರವರಾಗಲೀ ಹಾಗೂ ಆತನ ವಾರಸುದಾರರಾಗಲೀ ಯಾವುದೇ ತಕರಾರನ್ನು ಮಾಡಿರುವುದಿಲ್ಲ. ಪ್ರತಿವಾದಿ ಯರಿಗೂ ಹಾಗೂ ದಾವಾ ಅನುಸೂಚಿತ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ. ಅಂತೆ ಯೇ ಪ್ರತಿವಾದಿಯರಿಗೂ ಹಾಗೂ ಮೂಡಲಗಿರಿಯಪ್ಪ ಮತ್ತು ಆತನ ವಾರಸುದಾರರಿಗೆ ಯಾವುದೇ ಸಂಬಂಧ ಇರುವುದಿಲ್ಲ. ಮೂಡಲಗಿರಿಯಪ್ಪರವರ ವಾರಸುದಾರರು ಆತನ ಒಟ್ಟು ಕುಟುಂಬದ ಸದಸ್ಯರಾಗಿದ್ದು, ಪ್ರತಿವಾದಿಯರು ಬೇರೆ ಕುಟುಂಬದ ಸದಸ್ಯರಾಗಿರುತ್ತಾರೆ. ಅಂತೆಯೆ ಪ್ರತಿವಾದಿಯರಿಗೆ ದಾವಾ ಅನುಸೂಚಿತ ಸ್ವತ್ತಿನ ಕುರಿತು ದಿನಾಂಕ 04.03.1941 ರಿಂದ ಯಾವುದೇ ಸಂಬಂಧ ಇರುವುದಿಲ್ಲ. ಆದಾಗ್ಯೂ ಪ್ರತಿವಾದಿಯರು ವಾದಿಯರಿಗೆ ಸೇರಿದಂತಹ ಸ್ವತ್ತನ್ನು ಕಂದಾಯ ಅಧಿಕಾರಿಗಳೊಂದಿಗೆ ಷರೀಕಾಗಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ. ಈ ಮೇಲ್ಕಂಡ ಪ್ರತಿವಾದಿಯರ ಕೃತ್ಯವು ಕಾನೂನು ಬಾಹಿರವಾಗಿರುತ್ತದೆ. ಪ್ರತಿವಾದಿಯರಿಗೆ ದಾವಾ ಅನುಸೂಚಿತ ಸ್ವತ್ತಿನ ಕುರಿತು ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ ಇಲ್ಲದಿದ್ದಾಗ್ಯೂ ವಾದಿಯರಿಗೆ ತೊಂದರೆಯನ್ನು ನೀಡುವ ಸಲುವಾಗಿ, ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಈ ದಾವೆಯ ಕುರಿತು ವಾದಿಯರು ತಮ್ಮ ಪರವಾಗಿ ಮೇಲ್ನೋಟಕ್ಕೆ ಸಾಬಿತು ಪಡಿಸಬಹುದಾದ ಪ್ರಕರಣವನ್ನು ಹೊಂದಿದ್ದು, ಅನು ಕೂಲತೆಯ ಒಲುಮೆಯು ಸಹ ವಾದಿಯರ ಪರವಾಗಿ ಇರುತ್ತದೆ. ಪ್ರಸ್ತುತ ಈ ಮದ್ಯಂತರ ಅರ್ಜಿಯನ್ನು ಪುರಸ್ಕರಿಸಿದ್ದಲ್ಲಿ ವಾದಿಯರಿಗೆ ತುಂಬಲಾರದ ಹಾನಿ ಉಂಟಾಗುತ್ತದೆ. ಹಾಗಾಗಿ ಪ್ರತಿವಾದಿಯರು ಸಲ್ಲಿಸಿರುವಂತಹ ಮದ್ಯಂತರ ಅರ್ಜಿ ಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

13. ಈ ಮೇಲ್ಕಂಡ ಮಧ್ಯಂತರ ಅರ್ಜಿ ಸಂಖ್ಯೆ-1 ಕ್ಕೆ ಪೂರಕವಾಗಿ, ಪ್ರತಿವಾದಿಯರು ದಿನಾಂಕ 28.02.1972 ರ ನೋಂದಣಿ ವಿಭಾಗಪತ್ರದ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ಹೊಳಲ್ಕೆರೆ ತಾಲ್ಲೂಕು, ರಾಮಗಿರಿ ಹೋಬಳಿ, ತುಪ್ಪದಹಳ್ಳಿ ಗ್ರಾಮದ ವಾಸಿಯಾದ ಸಂಣಪ್ಪನ ಸಿದ್ದಪ್ಪರವರ ಮಕ್ಕಳಾದ 1 ನೇ ಕರಿಯಪ್ಪ ಮತ್ತು 2 ನೇ ಬಸಪ್ಪರವರು ಒಟ್ಟು ಕುಟುಂಬದ ಸ್ವತ್ತುಗಳ ಕುರಿತು ವಿಭಾಗ ಮಾಡಿಕೊಂಡಿದ್ದು, ಅದರಂತೆ 1 ನೇ ಹಿಸ್ಸೆಯ ಸ್ವತ್ತುಗಳು ಕರಿಯಪ್ಪರವರ ಭಾಗಕ್ಕೆ ಮತ್ತು 2 ನೇ ಹಿಸ್ಸೆಯ ಸ್ವತ್ತುಗಳು ಬಸಪ್ಪರವರ ಭಾಗಕ್ಕೆ ಬಂದಿರುವುದು ಕಂಡುಬಂದಿರುತ್ತದೆ. ಅದರಂತೆ ಸರ್ವೇ ನಂಃ 110/5 ರ 1 ಎಕರೆ, 16 ಗುಂಟೆ ಪೈಕಿ ಪಶ್ಚಿಮ ದಿಕ್ಕಿನ 28 ಗುಂಟೆ ಸ್ವತ್ತು, ಪೂರ್ವಕ್ಕೆ ಇದೇ ಪೈಕಿ ಬಸಪ್ಪರವರ ಹಿಸ್ಸೆ, ಪಶ್ಚಿಮಕ್ಕೆ ಹನುಮಪ್ಪನ ಹೊಲ, ಉತ್ತರಕ್ಕೆ ಮೂಡಲಗಿರಿಯಪ್ಪರವರ ಹೊಲ ಮತ್ತು ದಕ್ಷಿಣಕ್ಕೆ ಇದೇ ನಂಬರಿನ 1 ಎ ಹಿಸ್ಸೆಯ ಜಮೀನು ಎಂಬ ಚೆಕ್ಕುಬಂಧಿಗೆ ಒಳಪಟ್ಟಂತೆ, ಕರಿಯಪ್ಪರವರ ಹಿಸ್ಸೆಗೆ ಬಂದಿರುವುದು ಕಂಡುಬಂದಿರುತ್ತದೆ. ಅಂತೆಯೆ ಸರ್ವೇ ನಂ.110/5 ರ 1 ಎಕರೆ, 16 ಗುಂಟೆ ಪೈಕಿ, ಪೂರ್ವ ಭಾಗದ 28 ಗುಂಟೆ ಸ್ವತ್ತು, ಪಶ್ಚಿಮಕ್ಕೆ ಇದೇ ಪೈಕಿ ಕರಿಯಪ್ಪರವರ ಹಿಸ್ಸೆ, ಪೂರ್ವಕ್ಕೆ ಬಾಲಸಾನಿಯವರ ಹೊಲ, ಉತ್ತರಕ್ಕೆ ಮೂಡಲಗಿರಿಯಪ್ಪರವರ ಹೊಲ ಮತ್ತು ದಕ್ಷಿಣಕ್ಕೆ ಇದೇ ನಂಬರಿನ ಪೈಕಿ 1 ಎ ಹಿಸ್ಸೆಯ ಜಮೀನು ಎಂಬ ಚೆಕ್ಕುಬಂದಿಗೆ ಒಳಪಟ್ಟಂತೆ ಬಸಪ್ಪರವರ ಹಿಸ್ಸೆಗೆ ಬಂದಿರುವುದು ಕಂಡುಬರುತ್ತದೆ. ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ 2021-22 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಂತೆ ಎಂ.ಆರ್. ಹೆಚ್.49/2021-22 ರ ಪೌತಿ ಮೇರೆಗೆ ದಾವಾ ಸ್ವತ್ತಿನ ಖಾತೆಯು ಪ್ರತಿವಾದಿಯರ ಹೆಸರಿನಲ್ಲಿ ಜಂಟಿ ಇರುವುದು ಕಂಡುಬರುತ್ತದೆ. ಪ್ರತಿವಾದಿಯರು ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 110/5 ರ ಜಮೀನಿಗೆ ಸಂಬಂಧಿಸಿದಂತೆ ಮತ್ತು ಇತರೇ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕಂದಾಯ ರಶೀತಿಗಳನ್ನು ಹಾಜರು ಪಡಿಸಿರುತ್ತಾರೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 23/1 ರ ಕುರಿತಾಗಿ 1965-66 ನೇ ಸಾಲಿನಿಂದ 74-75 ನೇ ಸಾಲಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅದರಂತೆ ಪ್ರಾರಂಭಿಕ

ಹಂತದಲ್ಲಿ 1 ಎಕರೆ, 34 ಗುಂಟೆ ಸ್ವತ್ತಿನ ಖಾತೆಯು ಸಿದ್ದಪ್ಪ ಬಿನ್ ಸಂಣಪ್ಪರವರ ಹೆಸರಿನಲ್ಲಿ ನಮೂದು ಇದ್ದು, ಆನಂತರದಲ್ಲಿ ವಿಭಾಗದಂತೆ ಕರಿಯಪ್ಪ ಬಿನ್ ಸಿದ್ದಪ್ಪ ಮತ್ತು ಬಸಪ್ಪ ಬಿನ್ ಸಿದ್ದಪ್ಪರವರ ಹೆಸರಿನಲ್ಲಿ ನಮೂದಾಗಿರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಖಾತೆ ಸಂಖ್ಯೆ-3 ರ ಪಟ್ಟಾ ಮತ್ತು ರಶೀದಿ ಪುಸ್ತಕವನ್ನು ಹಾಜರುಪಡಿಸಿದ್ದು, ಅದರಂತೆ ದಾವಾ ಸ್ವತ್ತಾದ ಸರ್ವೇ 110/5 ರ 1 ಎಕರೆ 15 ಗುಂಟೆ ಸ್ವತ್ತಿನ ಖಾತೆಯು ಪ್ರತಿವಾದಿಯರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ.

14. ಈ ಮೇಲ್ಕಂಡ ಮಧ್ಯಂತರ ಅರ್ಜಿ ಸಂಖ್ಯೆ-1 ರ ಕುರಿತು ವಾದಿಯರು, ದಿನಾಂಕ 04.03.1941 ರ ನೋಂದಣಿಯಾಗದ ವಿಭಾಗಪತ್ರದ ದೃಡೀಕೃತ ಪ್ರತಿ ಯನ್ನು ಹಾಜರುಪಡಿಸಿದ್ದು, ಅದರಂತೆ ಸಂಣಪ್ಪರವರ ಮಕ್ಕಳಾದ ಸಿದ್ದಪ್ಪ ಮತ್ತು ಮೂಡಲಗಿರಿಯಪ್ಪರವರು ಒಟ್ಟು ಕುಟುಂಬದ ಸ್ವತ್ತುಗಳ ಕುರಿತು ವಿಭಾಗ ಮಾಡಿ ಕೊಂಡಿದ್ದು, ಅದರಂತೆ ಸಿದ್ದಪ್ಪರವರ ಖಾತೆ ಮತ್ತು ಸ್ವಾಧೀನಾನುಭವದಲ್ಲಿರುವ ಸರ್ವೇ ನಂಃ23 ರ ತೋಟವು ಮೂಡಲಗಿರಿಯಪ್ಪರವರಿಗೂ, ಇದೇ ನಂಬರಿನಲ್ಲಿ ಇರುವ ಖುಷ್ಕಿ ಜಮೀನು ಸಿದ್ದಪ್ಪರವರಿಗೂ, ಅಂತೆಯೆ ಸರ್ವೇ ನಂ.22/7 ರಲ್ಲಿನ ಜಮೀನು ಸಿದ್ದಪ್ಪರವರಿಗೂ ಹಾಗೂ ಸರ್ವೇ ನಂಃ 110/5 ರ ದಕ್ಷಿಣದ ಮೇಡು ಅಂದರೆ ಕಲ್ಲು ಭೂಮಿಯು ಸಿದ್ದಪ್ಪನಿಗೂ, ಉತ್ತರದ ಕಡೆ ಆನವು ಪ್ರದೇಶವು ಮೂಡಲಗಿರಿಯಪ್ಪನಿಗೂ ಹಾಗೂ 110/5 ರಲ್ಲಿ ಅಡ್ಡಗಲ್ಲು ಪೂರ್ತಿಯಾಗಿ ಮೂಡಲ ಗಿರಿಯಪ್ಪನಿಗೂ ಎಂದು ಉಲ್ಲೇಖ ಇದ್ದು, ಇತರೆ ಸ್ವತ್ತುಗಳ ಕುರಿತು ಕೂಡ ವಿಭಾಗ ಮಾಡಿಕೊಂಡಿರುವುದು ಕಂಡುಬರುತ್ತದೆ. ಮೂಡಲಗಿರಿಯಪ್ಪ, ಗಂಗಮ್ಮ ಮತ್ತು ತಿಮ್ಮಯ್ಯರವರಿಗೆ ಸಂಬಂಧಿಸಿದ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತಾರೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 110/5 ರ 1965-66 ನೇ ಸಾಲಿನಿಂದ 1999-2000 ನೇ ಸಾಲಿನ ವರೆಗಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅದರಂತೆ 1 ಎಕರೆ, 15 ಗುಂಟೆ ಸ್ವತ್ತಿನ ಕುರಿತು ಸಿದ್ದಪ್ಪ ಬಿನ್ ಸಂಣಪ್ಪರವರ ಹೆಸರಿನಲ್ಲಿ ಖಾತೆ ನಮೂದಾಗಿದ್ದು, ಸ್ವಾಧೀನದಾರರು ಎಂಬಲ್ಲಿ, ಖುದ್ದು 28 ಗುಂಟೆ ಎಂದು ಹಾಗೂ

ಮೂಡಲಗಿರಿಯಪ್ಪರವರ ಹೆಸರಿನಲ್ಲಿ 27 ಗುಂಟೆ ಸ್ವತ್ತಿನ ಕುರಿತು ನಮೂದು ಇರುವುದು ಕಂಡುಬರುತ್ತದೆ. ಆನಂತರದಲ್ಲಿ ಸಂಪೂರ್ಣ 1 ಎಕರೆ, 15 ಗುಂಟೆ ಸ್ವತ್ತಿನ ಕುರಿತು ಕರಿಯಪ್ಪ ಬಿನ್ ಸಿದ್ದಪ್ಪ ಮತ್ತು ಬಸಪ್ಪ ಬಿನ್ ಸಿದ್ದಪ್ಪರವರ ಹೆಸರಿನಲ್ಲಿ ಎಂ.ಆರ್.28/1972 ರಂತೆ ಖಾತೆ ಏರ್ಪಟ್ಟಿರುವುದು ಕಂಡುಬರುತ್ತದೆ. ಆನಂತರ ದಲ್ಲಿ 1985-86 ನೇ ಸಾಲಿನಿಂದ 1988-89 ನೇ ಸಾಲಿನವರೆಗೆ ಖಾತೆ ದಾರರು ಎಂಬಲ್ಲಿ, ಸಿದ್ದಪ್ಪ ಬಿನ್ ಸಣ್ಣಪ್ಪ ಎಂದು ಹಾಗೂ ವ್ಯವಸಾಯಗಾರರು ಎಂಬಲ್ಲಿ ಮೂಡಲಗಿರಿಯಪ್ಪ ಎಂದು ನಮೂದು ಇರುವುದು ಕಂಡುಬರುತ್ತದೆ. ಅಂತೆಯೆ ಸರ್ವೇ ನಂಃ 110/5 ರ 2001-02, 2010-11, 2019-20 ನೇ ಸಾಲಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅದರಂತೆ 1 ಎಕರೆ, 15 ಗುಂಟೆ ಸ್ವತ್ತಿನ ಕುರಿತು ಸಿದ್ದಪ್ಪ ಬಿನ್ ಸಣ್ಣಪ್ಪರವರ ಹೆಸರಿನಲ್ಲಿ ಖಾತೆ ನಮೂದು ಇರುವುದು ಕಂಡುಬರುತ್ತದೆ. ಅಂತೆಯೆ ಸರ್ವೇ ನಂಃ 110/5 ರ 2022-23 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಂತೆ 1 ಎಕರೆ, 15 ಗುಂಟೆ ಸ್ವತ್ತಿನ ಕುರಿತು ಎಂ.ಆರ್. ಹೆಚ್.49/2021-22 ರ ಪೌತಿ ಮೇರೆಗೆ ಪ್ರತಿವಾದಿಯರ ಹೆಸರಿನಲ್ಲಿ ಖಾತೆ ನಮೂದು ಇರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಖಾತೆ ಸಂಖ್ಯೆ-3 ರ ಪಟ್ಟಾ ಮತ್ತು ರಶೀದಿ ಪುಸ್ತಕವನ್ನು ಹಾಜರುಪಡಿಸಿದ್ದು, ಅದರಂತೆ ದಾವಾ ಸ್ವತ್ತಿನ ಖಾತೆಯು ಪ್ರತಿವಾದಿಯರ ಹೆಸರಿನಲ್ಲಿ ನಮೂದು ಇರುವುದು ಕಂಡು ಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ148, 147 ರ 2022-23 ನೇ ಸಾಲಿನ ಪಹಣಿ ಗಳನ್ನು ಹಾಜರುಪಡಿಸಿದ್ದು, ಅದರಂತೆ ಸದರಿ ಸ್ವತ್ತುಗಳ ಖಾತೆಯು ಪ್ರತಿವಾದಿಯರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 23/1 ರ ಕುರಿತಾಗಿ 1965-66 ನೇ ಸಾಲಿನಿಂದ 1979-80 ನೇ ಸಾಲಿನ ವರೆಗಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅದರಂತೆ ಸದರಿ ಸ್ವತ್ತುಗಳ ಖಾತೆಯು ಪ್ರಾರಂಭಿಕ ಹಂತದಲ್ಲಿ ಸಿದ್ದಪ್ಪ ಬಿನ್ ಸಂಣಪ್ಪರವರ ಹೆಸರಿನಲ್ಲಿ ನಮೂದು ಇದ್ದು, ಆನಂತರದಲ್ಲಿ ಪಾಲು ವಿಭಾಗದಂತೆ ಕರಿಯಪ್ಪ ಬಿನ್ ಸಿದ್ದಪ್ಪ ಮತ್ತು ಬಸಪ್ಪ ಬಿನ್ ಸಿದ್ದಪ್ಪರವರ ಹೆಸರಿನಲ್ಲಿ ಖಾತೆ ಏರ್ಪಟ್ಟಿರುವುದು ಕಂಡುಬರುತ್ತದೆ. ತುಪ್ಪದಹಳ್ಳಿ

ಗ್ರಾಮದ ಸರ್ವೇ ನಂಃ 98/3 ಎ ರ ಕುರಿತಾಗಿ 1965-66 ನೇ ಸಾಲಿನಿಂದ 1979-80 ನೇ ಸಾಲಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅದರಂತೆ ಸದರಿ ಸ್ವತ್ತಿನ ಖಾತೆಯು ಪ್ರಾರಂಭಿಕ ಹಂತದಲ್ಲಿ ಸಿದ್ದಪ್ಪ ಬಿನ್ ಸಣ್ಣಪ್ಪರವರ ಹೆಸರಿನಲ್ಲಿ ನಮೂದು ಇದ್ದು, ಆನಂತರದಲ್ಲಿ ಪರಿವರ್ತನಪತ್ರದ ಆದಾರದಲ್ಲಿ ಎಂ.ಜಿ. ಮಹಾದೇವಪ್ಪ ಬಿನ್ ಗಿರಿಮಲ್ಲಪ್ಪರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 110/1 ಬಿ ಗೆ ಸಂಬಂಧಿಸಿದಂತೆ 1965-66 ನೇ ಸಾಲಿನಿಂದ 1979-80 ನೇ ಸಾಲಿನ ವರೆಗಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅದರಂತೆ 37 ಗುಂಟೆ ವಿಸ್ತೀರ್ಣದ ಸ್ವತ್ತಿನ ಖಾತೆಯು ಮೂಡಲಗಿರಿಯಪ್ಪ ಬಿನ್ ಸಂಣಪ್ಪರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 110/1 ಎ ಗೆ ಸಂಬಂಧಿಸಿದಂತೆ 1965-66 ನೇ ಸಾಲಿನಿಂದ 1979-80 ನೇ ಸಾಲಿನವರೆಗಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅದರಂತೆ 4 ಎಕರೆ 10 ಗುಂಟೆ ಸ್ವತ್ತಿನ ಖಾತೆಯು ಪಾಲು ವಿಭಾಗದಂತೆ ಕರಿಯಪ್ಪ ಬಿನ್ ಸಿದ್ದಪ್ಪ ಮತ್ತು ಬಸಪ್ಪ ಬಿನ್ ಸಿದ್ದಪ್ಪರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದ 1965-66 ನೇ ಸಾಲಿನ 1979-80 ನೇ ಸಾಲಿನ ಪಹಣಿಗಳನ್ನು ಹಾಜರುಪಡಿಸಿದ್ದು ಅದರಂತೆ 1965-66 ರಿಂದ 1968-69 ರ ಪಹಣಿಗಳಲ್ಲಿ 1 ಎಕರೆ 15 ಗುಂಟೆ ಸ್ವತ್ತಿನ ಖಾತೆಯು ಸಿದ್ದಪ್ಪ ಬಿನ್ ಸಂಣಪ್ಪರವರ ಹೆಸರಿನಲ್ಲಿ ನಮೂದು ಇದ್ದು, ವ್ಯವಸಾಯಗಾರರು ಎಂಬಲ್ಲಿ ಸದರಿರವರ ಹೆಸರಿನಲ್ಲಿ 28 ಗುಂಟೆ ಸ್ವತ್ತಿನ ಕುರಿತು, ಉಳಿಕೆ 27 ಗುಂಟೆ ಸ್ವತ್ತಿನ ಕುರಿತು ಮೂಡಲಗಿರಿಯಪ್ಪರವರ ಹೆಸರನಲ್ಲಿ ನಮೂದು ಇರುವುದು ಕಂಡುಬರುತ್ತದೆ. ಆನಂತರದಲ್ಲಿ ಎಂ.ಆರ್.28 ರಂತೆ ದಿನಾಂಕ 28.02.1972 ರ ವಿಭಾಗದಂತೆ ಕರಿಯಪ್ಪ ಬಿನ್ ಸಿದ್ದಪ್ಪ ಮತ್ತು ಬಸಪ್ಪ ಬಿನ್ ಸಿದ್ದಪ್ಪರವರ ಹೆಸರಿನಲ್ಲಿ ತಲಾ 28 ಗುಂಟೆ ಸ್ವತ್ತಿನ ಕುರಿತು ಖಾತೆ ನಮೂದು ಇರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 110/1 ಬಿ ಗೆ ಸಂಬಂಧಿಸಿದಂತೆ 2017-18 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಂತೆ 37 ಗುಂಟೆ ಸ್ವತ್ತಿನ ಖಾತೆಯು ಸಣ್ಣಪ್ಪ

ಬಿನ್ ಮೂಡಲಗಿರಿಯಪ್ಪ ಮತ್ತು ಮಲ್ಲೇಶಪ್ಪ ಬಿನ್ ಮೂಡಲಗಿರಿಯಪ್ಪರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 67/3 ರ 2016-17 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಂತೆ 1 ಎಕರೆ 25 ಗುಂಟೆ ಸ್ವತ್ತಿನ ಖಾತೆಯು ಸಣ್ಣಪ್ಪ ಬಿನ್ ಮೂಡಲಗಿರಿಯಪ್ಪ ಮತ್ತು ಮಲ್ಲೇಶಪ್ಪ ಬಿನ್ ಮೂಡಲಗಿರಿಯಪ್ಪರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ 112/1 ಎ ರ 2016-17 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಂತೆ 1 ಎಕರೆ 25 ಗುಂಟೆ ಸ್ವತ್ತಿನ ಖಾತೆಯು ಸಣ್ಣಪ್ಪ ಬಿನ್ ಮೂಡಲಗಿರಿಯಪ್ಪ ಮತ್ತು ಮಲ್ಲೇಶಪ್ಪ ಬಿನ್ ಮೂಡಲ ಗಿರಿಯಪ್ಪರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ.

15. ಈ ಮೇಲ್ಕಂಡ ಉಭಯಪಕ್ಷಗಾರರ ಹೇಳಿಕೆಗಳು, ಉಭಯಪಕ್ಷಗಾರರು ಹಾಜರುಪಡಿಸಿರುವ ದಾಖಲಾತಿಗಳು ಮತ್ತು ಉಭಯಪಕ್ಷಗಾರರ ಪರ ವಕೀಲರ ವಾದವನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಪ್ರತಿವಾದಿಯರು ಪ್ರಸ್ತುತ ಈ ಮಧ್ಯಂತರ ಅರ್ಜಿಯನ್ನು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿದ್ದು, ಹಾಗಾಗಿ ಸದರಿ ಅರ್ಜಿಯನ್ನು ಪರಿಗಣಿಸುವ ಕಾಲಕ್ಕೆ ಕೆಲವೊಂದು ಕಾನೂನಿನ ಅಂಶಗಳನ್ನು ಪರಿಗಣಿಸ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ, ಪ್ರತಿವಾದಿಯರು ಈ ದಾವೆಯಲ್ಲಿ ಮೇಲ್ನೋಟಕ್ಕೆ ಸಾಬೀತುಪಡಿಸಬಹುದಾದ ಪ್ರಕರಣವನ್ನು ಹೊಂದಿರುತ್ತೇವೆ ಎಂಬುದನ್ನು, ದಾವೆಯ ಕುರಿತಾಗಿ ಅನುಕೂಲತೆಯ ಒಲುಮೆ ತಮ್ಮ ಪರವಾಗಿ ಇದೆ ಎಂಬುದನ್ನು ಹಾಗೂ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ಮಂಜೂರಾತಿ ಮಾಡದಿದ್ದಲ್ಲಿ, ಪ್ರತಿವಾದಿಯರಿಗೆ ತುಂಬಲಾರದ ಹಾನಿಯುಂಟಾಗುತ್ತದೆ ಎಂಬುದನ್ನು ಸಾಬೀತುಪಡಿಸಬೇಕಾಗುತ್ತದೆ. ಈ ಮೇಲ್ಕಂಡ ಮೂರು ಅಂಶಗಳನ್ನು ಸಾಬೀತು ಪಡಿಸಿದ್ದಲ್ಲಿ, ಪ್ರತಿವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸ ಬೇಕಾಗುತ್ತದೆ ಎಂದು, ಒಂದೊಮ್ಮೆ ಸದರಿ ಅಂಶಗಳನ್ನು ಸಾಬೀತುಪಡಿಸಲು ವಿಫಲ

ವಾದಲ್ಲಿ, ಪ್ರತಿವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಪರಿಗಣಿಸಲು ಬರುವುದಿಲ್ಲವೆಂಬುದು ಕಾನೂನಿನ ಪರಿಕಲ್ಪನೆಯಾಗಿರುತ್ತದೆ.

16. ಈ ಮೇಲ್ಕಂಡ ಕಾನೂನಿನ ಅಂಶಗಳ ಹಿನ್ನೆಲೆಯಲ್ಲಿ, ಉಭಯ ಪಕ್ಷಕಾರರು ಸಲ್ಲಿಸಿರುವ ವಾದಪತ್ರ, ಪ್ರತಿವಾದ ಪತ್ರ, ಮಧ್ಯಂತರ ಅರ್ಜಿ ಸಂಖ್ಯೆ-1 ಹಾಗೂ ಸದರಿ ಅರ್ಜಿಗೆ ಸಲ್ಲಿಸಿರುವ ತಕರಾರನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ವಾದಿಯರು ಪ್ರಸ್ತುತ ಈ ದಾವೆಯನ್ನು ಹೊಳಲ್ಕೆರೆ ತಾಲ್ಲೂಕು, ರಾಮಗಿರಿ ಹೋಬಳಿ, ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 110/5 ರ 1 ಎಕರೆ 15 ಗುಂಟೆ ಸ್ವತ್ತಿನ ಪೂರ್ವಕ್ಕೆ-ಗ್ರಾಮ ಠಾಣಾ, ಪಶ್ಚಿಮಕ್ಕೆ-ಮಲ್ಲೇಶಪ್ಪ ಬಿನ್ ರುದ್ರಪ್ಪರವರ ಜಮೀನು, ಉತ್ತರಕ್ಕೆ-ವೀರಬಸಪ್ಪ ಬಿನ್ ಬಸಪ್ಪನವರ ಜಮೀನು, (ಪ್ರಸ್ತುತ ಶಿವಮೂರ್ತಪ್ಪ ಬಿನ್ ಲೇಟ್ ಮಲ್ಲಪ್ಪ ಮತ್ತು ಇತರರು ಸ್ವಾಧೀನತೆಯಲ್ಲಿರುವ ಜಮೀನು) ಮತ್ತು ದಕ್ಷಿಣಕ್ಕೆ-ತಿಮ್ಮಪ್ಪ ಬಿನ್ ಕುರಿರಂಗಪ್ಪನ ಜಮೀನು (ಪ್ರಸ್ತುತ ಗಂಗಾಧರಪ್ಪ ಬಿನ್ ಊರುಮಲ್ಲಪ್ಪರವರ ಜಮೀನು) ಎಂಬ ಚೆಕ್ಕು ಬಂದಿಗೆ ಒಳಪಟ್ಟಂತೆ ಸಲ್ಲಿಸಿರುತ್ತಾರೆ. ಪ್ರತಿವಾದಿಯರು ಈ ಮೇಲ್ಕಂಡ ದಾವಾ ಅನುಸೂಚಿತ ಚೆಕ್ಕುಬಂಧಿಗೆ ಒಳಪಟ್ಟಂತಹ ಸ್ವತ್ತಿನ ಕುರಿತು ಪ್ರತಿ ಹಕ್ಕು ದಾವೆಯನ್ನು ಸಲ್ಲಿಸಿರುತ್ತಾರೆ. ವಿಚಾರಣಾ ನ್ಯಾಯಾಲಯದಲ್ಲಿ ಪ್ರತಿವಾದಿಯರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಸಲ್ಲಿಸಿ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿರುತ್ತಾರೆ. ಸದರಿ ಅರ್ಜಿಯ ಕುರಿತಾಗಿ ವಿಚಾರಣಾ ನ್ಯಾಯಾಲಯವು ಅಂಶ-1 ರಿಂದ 3 ನ್ನು ನಕಾರಾತ್ಮಕವೆಂದು ನಿರ್ಣಯಿಸಿ, ಪ್ರತಿವಾದಿಯರು ಸಲ್ಲಿಸಿದ್ದ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ತಿರಸ್ಕರಿಸಿ ಆದೇಶಿಸಿರುತ್ತದೆ. ವಾದಿಯರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ-2 ನ್ನು ಸಲ್ಲಿಸಿ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿರುತ್ತಾರೆ. ಸದರಿ ಅರ್ಜಿಯ ಕುರಿತಾಗಿ ವಿಚಾರಣಾ ನ್ಯಾಯಾಲಯವು ಅಂಶ-1 ರಿಂದ 3 ನ್ನು ನಕಾರಾತ್ಮಕವೆಂದು ನಿರ್ಣಯಿಸಿ, ವಾದಿಯರು ಸಲ್ಲಿಸಿದ್ದ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು

ತಿರಸ್ಕರಿಸಿ ಆದೇಶಿಸಿರುತ್ತದೆ. ಸದರಿ ಆದೇಶದ ವಿರುದ್ದ ವಾದಿಯರು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಪ್ರತಿವಾದಿಯರು ಸದರಿ ಆದೇಶದ ಕುರಿತಾಗಿ ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಹಾಗಾಗಿ ಪ್ರತಿವಾದಿಯರು ಸಲ್ಲಿಸಿರುವಂತಹ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪರಿಗಣಿಸುವ ಸೀಮಿತ ಉದ್ದೇಶಕ್ಕಾಗಿ ಈ ಕೆಳಕಂಡಂತೆ ಚರ್ಚಿಸಲಾಗುತ್ತದೆ.

17. ಈ ಮೇಲ್ಕಂಡ ಅಂಶಗಳ ಕುರಿತಾಗಿ ಪ್ರತಿವಾದಿಯರ ಪರವಾಗಿ ಹಾಜರು ಪಡಿಸಿರುವಂತಹ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ದಿನಾಂಕ 28.02.1972 ರ ನೋಂದಣಿ ವಿಭಾಗಪತ್ರದ ಆದಾರದಲ್ಲಿ ದಾವಾ ಅನುಸೂಚಿತ ಸರ್ವೇ ನಂಃ 110/5 ರ 1 ಎಕರೆ, 15 ಗುಂಟೆ ಸ್ವತ್ತಿನ ಪೈಕಿ, 1 ರಿಂದ 3 ನೇ ಪ್ರತಿವಾದಿಯರ ಕುಟುಂಬದ ಪೂರ್ವಜರಾದ ಕರಿಯಪ್ಪ ಬಿನ್ ಸಿದ್ದಪ್ಪರವರ ಹಿಸ್ಸೆಗೆ ಸರ್ವೇ ನಂಃ 110/5 ರ 1 ಎಕರೆ, 16 ಗುಂಟೆ ಪೈಕಿ ಪಶ್ಚಿಮ ದಿಕ್ಕಿನ 28 ಗುಂಟೆ ಸ್ವತ್ತು, ಪೂರ್ವಕ್ಕೆ-ಇದೇ ಪೈಕಿ ಬಸಪ್ಪರವರ ಹಿಸ್ಸೆ, ಪಶ್ಚಿಮಕ್ಕೆ-ಹನುಮಪ್ಪನ ಹೊಲ, ಉತ್ತರಕ್ಕೆ-ಮೂಡಲಗಿರಿಯಪ್ಪರವರ ಹೊಲ ಮತ್ತು ದಕ್ಷಿಣಕ್ಕೆ-ಇದೇ ನಂಬರಿನ 1 ಎ ಹಿಸ್ಸೆಯ ಜಮೀನು ಎಂಬ ಚೆಕ್ಕುಬಂಧಿಗೆ ಒಳಪಟ್ಟಂತೆ ಬಂದಿರುವುದು ಕಂಡು ಬಂದಿರುತ್ತದೆ. ಅಂತೆಯೆ 4 ನೇ ಪ್ರತಿವಾದಿಯ ಕುಟುಂಬದ ಪೂರ್ವಜರಾದ ಬಸಪ್ಪ ರವರ ಹಿಸ್ಸೆಗೆ ಸರ್ವೇ ನಂ.110/5 ರ 1 ಎಕರೆ, 16 ಗುಂಟೆ ಪೈಕಿ, ಪೂರ್ವ ಭಾಗದ 28 ಗುಂಟೆ ಸ್ವತ್ತು, ಪಶ್ಚಿಮಕ್ಕೆ ಇದೇ ಪೈಕಿ ಕರಿಯಪ್ಪರವರ ಹಿಸ್ಸೆ, ಪೂರ್ವಕ್ಕೆ ಬಾಲಸಾನಿಯವರ ಹೊಲ, ಉತ್ತರಕ್ಕೆ ಮೂಡಲಗಿರಿಯಪ್ಪರವರ ಹೊಲ ಮತ್ತು ದಕ್ಷಿಣಕ್ಕೆ ಇದೇ ನಂಬರಿನ ಪೈಕಿ 1 ಎ ಹಿಸ್ಸೆಯ ಜಮೀನು ಎಂಬ ಚೆಕ್ಕುಬಂದಿಗೆ ಒಳಪಟ್ಟಂತೆ ಬಂದಿರುವುದು ಕಂಡುಬರುತ್ತದೆ. ಈ ಮೇಲ್ಕಂಡ ಉಲ್ಲೇಖಗಳ ಹಿನ್ನಲೆಯಲ್ಲಿ ವಾದಿಯರು ಸಲ್ಲಿಸಿರುವಂತಹ ವಾದಪತ್ರದಲ್ಲಿನ ಚೆಕ್ಕುಬಂದಿಯ ಕುರಿತು ಪರಿಶೀಲಿಸಲಾಗಿ, ಈ ಮೇಲ್ಕಂಡ ದಾಖಲಾತಿಯಲ್ಲಿನ ಚೆಕ್ಕುಬಂದಿ ಮತ್ತು ವಾದಪತ್ರ ದಲ್ಲಿನ ಚೆಕ್ಕುಬಂದಿ ಒಂದಕ್ಕೊಂದು ವ್ಯತಿರಿಕ್ತತೆಯಿಂದ ಕೂಡಿರುವುದು ಕಂಡು ಬರುತ್ತದೆ. ಪ್ರತಿವಾದಿಯರು ಪ್ರಸ್ತುತ ಈ ದಾವೆಯಲ್ಲಿ ಪ್ರತಿ ಹಕ್ಕು ದಾವೆಯ ಕುರಿತು

ಪರಿಹಾರವನ್ನು ಕೋರಿದ್ದಾಗ್ಯೂ, ಪ್ರತಿವಾದ ಪತ್ರದಲ್ಲಿ ಪ್ರತಿ ಹಕ್ಕು ಅನುಸೂಚಿತ ಸ್ವತ್ತಿನ ಕುರಿತು ಯಾವುದೇ ಉಲ್ಲೇಖ ಇರುವುದಿಲ್ಲ. ಅದಕ್ಕೆ ಪ್ರತಿಯಾಗಿ ವಾದಪತ್ರದ ಅನುಸೂಚಿತ ಸ್ವತ್ತಿನ ಕುರಿತು ನಮೂದು ಇರುತ್ತದೆ. ಆದಾಗ್ಯೂ ಪ್ರತಿವಾದಿಯರು ಸಲ್ಲಿಸಿರುವಂತಹ ಪ್ರತಿವಾದ ಪತ್ರದಲ್ಲಿ ಹಾಗೂ ಪ್ರತಿ ಹಕ್ಕು ದಾವೆಯಲ್ಲಿ ದಿನಾಂಕ 28.02.1978 ರ ದಾವಾ ಸ್ವತ್ತಿನಲ್ಲಿನ ಚೆಕ್ಕುಬಂದಿ ಪ್ರಸ್ತುತ ವಾದಪತ್ರದಲ್ಲಿನ ಚೆಕ್ಕುಬಂದಿಯ ರೂಪದಲ್ಲಿ ಯಾವ ರೀತಿಯಾಗಿ ಮಾರ್ಪಾಡಾಗಿರುತ್ತದೆ ಎಂಬುದರ ಕುರಿತು ಯಾವುದೇ ಉಲ್ಲೇಖ ಇರುವುದಿಲ್ಲ. ಹಾಗಾಗಿ ಪ್ರಾರಂಭಿಕ ಹಂತದಲ್ಲಿ ಭೌತಿಕವಾಗಿ ಅಸ್ತಿತ್ವದಲ್ಲಿ ಇಲ್ಲದಂತಹ ಸ್ವತ್ತಿನ ಕುರಿತು ನಿರ್ಬಂಧಕಾಜ್ಞೆಯ ಆದೇಶ ವನ್ನು ಪಡೆಯಲು ಬರುವುದಿಲ್ಲ ಎಂಬ ಕಾನೂನಿನ ಅಂಶಗಳ ಹಿನ್ನಲೆಯಲ್ಲಿ ಪರಿಶೀಲಿಸಲಾಗಿ, ಪ್ರತಿವಾದಿಯರು ಸಲ್ಲಿಸಿರುವಂತಹ ಮಧ್ಯಂತರ ಅರ್ಜಿಯ ಕುರಿತಾಗಿ ಅಸ್ಪಷ್ಟತೆ ಕಂಡುಬರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಪ್ರತಿವಾದಿಯರು ಹಾಜರುಪಡಿಸಿರುವಂತಹ ದಾಖಲಾತಿಗಳ ಕುರಿತು ಕೂಲಂಕುಷವಾಗಿ ಪರಿಶೀಲಿಸ ಲಾಗಿ, ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ದಾವೆಯನ್ನು ಸಲ್ಲಿಸುವ ವರ್ಷಕ್ಕೆ ಸಂಬಂಧಿಸಿದಂತೆ 2021-22 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಂತೆ ಎಂ.ಆರ್.ಹೆಚ್-49/2021-22 ರ ದಿನಾಂಕ 26.05.2022 ರ ಪೌತಿ ಮೇರೆಗೆ ಪ್ರತಿವಾದಿಯರ ಹೆಸರಿನಲ್ಲಿ ದಾವಾ ಸ್ವತ್ತಿನ ಕುರಿತು ಜಂಟಿ ಖಾತೆ ಏರ್ಪಟ್ಟಿ ರುವುದು ಕಂಡುಬರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ 28.02.1972 ರ ನೋಂದಣಿ ವಿಭಾಗಪತ್ರದ ಜಾರಿಯಾಗುವಿಕೆಯ ಕುರಿತು ಮತ್ತು ಸದರಿ ದಾಖಲಾತಿಯು ಕಾರ್ಯ ಪ್ರವೃತ್ತವಾಗಿರುವ ಕುರಿತು ಪರಿಶೀಲಿಸಲಾಗಿ, ಸದರಿ ವಿಭಾಗದಂತೆ 1 ರಿಂದ 3 ನೇ ಪ್ರತಿವಾದಿಯರ ಕುಟುಂಬದಿಂದ ಪೂರ್ವಜರ ಹೆಸರಿನಲ್ಲಿ 28 ಗುಂಟೆ ಸ್ವತ್ತಿನ ಕುರಿತು ಖಾತೆ ಏರ್ಪಟ್ಟಿರುವ ಬಗ್ಗೆ ಹಾಗೂ 4 ನೇ ಪ್ರತಿವಾದಿಯ ಕುಟುಂಬದವರ ಹೆಸನರಿಲ್ಲಿ, ಖಾತೆ ಏರ್ಪಟ್ಟಿರುವ ಕುರಿತು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದಿ ರುವುದು ಕಂಡುಬರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ದಿನಾಂಕ 28.02.1972 ರ ಅವಧಿಯಲ್ಲಿ ದಾವಾ ಅನುಸೂಚಿತ ಸಂಪೂರ್ಣ ಸ್ವತ್ತು ಪ್ರತಿವಾದಿಯರ ಕುಟುಂಬಕ್ಕೆ

ಸೇರಿತ್ತು ಎಂಬುದರ ಕುರಿತು ಯಾವುದೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಹಾಗಾಗಿ ಈ ಅಂಶವು ಕೂಡ ಪ್ರತಿವಾದಿಯರ ದಾವೆಯ ಕುರಿತು ಅಸ್ಪಷ್ಟತೆಯನ್ನು ಉಂಟು ಮಾಡುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಪ್ರತಿವಾದಿಯರು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ 1971-72 ನೇ ಸಾಲಿನಿಂದ ದಾವೆಯನ್ನು ಸಲ್ಲಿಸುವ ಅವಧಿಯವರೆಗಿನ ಸಂಪೂರ್ಣ ಪಹಣಿಗಳನ್ನು ಹಾಗೂ ಸದರಿ ಪಹಣಿಗಳಿಗೆ ಸಂಬಂಧಿಸಿದಂತಹ ಮ್ಯುಟೇಷನ್ ವಹಿಗಳನ್ನು ಹಾಜರುಪಡಿಸಿರುವುದಿಲ್ಲ. ಹಾಗಾಗಿ ಈ ಅಂಶವು ಕೂಡ ಪ್ರತಿವಾದಿಯರು ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ 1971-72 ನೇ ಸಾಲಿನಿಂದ ದಾವೆಯನ್ನು ಸಲ್ಲಿಸುವ ಅವಧಿಯವರೆಗೆ ನಿರಂತರವಾದ ಮತ್ತು ನಿಶ್ಚಿತವಾದ ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂಬುದರ ಕುರಿತು ಸ್ಪಷ್ಟತೆ ಇರುವುದಿಲ್ಲ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

18. ಈ ಮೇಲ್ಕಂಡಂತೆ ಪ್ರತಿವಾದಿಯರ ಪರವಾಗಿ ಹಾಜರುಪಡಿಸಿರುವ ದಾಖಲಾತಿಗಳ ನಂತರದಲ್ಲಿ, ವಾದಿಯರ ಪರವಾಗಿ ಹಾಜರುಪಡಿಸಿರುವ ದಾಖಲಾತಿಗಳ ಕುರಿತು ಪರಿಶೀಲಿಸಲಾಗಿ, ದಿನಾಂಕ 04.03.1941 ರ ನೋಂದಣಿ ಯಾಗದ ವಿಭಾಗಪತ್ರದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ಸಂಣಪ್ಪರವರ ಮಕ್ಕಳಾದ ಸಿದ್ದಪ್ಪ ಮತ್ತು ಮೂಡಲಗಿರಿಯಪ್ಪರವರು ಒಟ್ಟು ಕುಟುಂಬದ ಸ್ವತ್ತುಗಳ ಕುರಿತು ವಿಭಾಗ ಮಾಡಿಕೊಂಡಿದ್ದು, ಅದರಂತೆ ಸಿದ್ದಪ್ಪರವರ ಖಾತೆ ಮತ್ತು ಸ್ವಾಧೀನಾನುಭವದಲ್ಲಿರುವ ಸರ್ವೇ ನಂಃ23 ರ ತೋಟವು ಮೂಡಲ ಗಿರಿಯಪ್ಪ ರವರಿಗೂ, ಇದೇ ನಂಬರಿನಲ್ಲಿ ಇರುವ ಖುಷ್ಕಿ ಜಮೀನು ಸಿದ್ದಪ್ಪರವರಿಗೂ, ಅಂತೆಯೆ ಸರ್ವೇ ನಂ.22/7 ರಲ್ಲಿನ ಜಮೀನು ಸಿದ್ದಪ್ಪರವರಿಗೂ ಹಾಗೂ ಸರ್ವೇ ನಂಃ 110/5 ರ ದಕ್ಷಿಣದ ಮೇಡು ಅಂದರೆ ಕಲ್ಲು ಭೂಮಿಯು ಸಿದ್ದಪ್ಪನಿಗೂ, ಉತ್ತರದ ಕಡೆ ಆನವು ಪ್ರದೇಶವು ಮೂಡಲಗಿರಿಯಪ್ಪನಿಗೂ ಹಾಗೂ 110/5 ರಲ್ಲಿ ಅಡ್ಡಗಲ್ಲು ಪೂರ್ತಿಯಾಗಿ ಮೂಡಲ ಗಿರಿಯಪ್ಪನಿಗೂ ಎಂದು ಉಲ್ಲೇಖ ಇದ್ದು, ಇತರೆ ಸ್ವತ್ತುಗಳ ಕುರಿತು ಕೂಡ ವಿಭಾಗ ಮಾಡಿಕೊಂಡಿರುವುದು ಕಂಡುಬರುತ್ತದೆ. ಈ ಮೇಲ್ಕಂಡ ದಾಖಲಾತಿಯಲ್ಲಿನ

ಉಲ್ಲೇಖಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಾದಿ ಯರು ಮತ್ತು ಪ್ರತಿವಾದಿ ಯರು ಮೂಲತಃ ತುಪ್ಪದಹಳ್ಳಿ ಗ್ರಾಮದ ಸಂಣಪ್ಪರವರ ಮಕ್ಕಳಾದ ಸಿದ್ದಪ್ಪ ಹಾಗೂ ಮೂಡಲಗಿರಿಯಪ್ಪರವರ ವಾರಸುದಾರರು ಎಂಬುದು ಕಂಡುಬರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಅಂತೆಯೆ ಈ ಮೇಲ್ಕಂಡ ದಾಖಲಾತಿಯಂತೆ ವಿಭಾಗ ಏರ್ಪಟ್ಟಿರುವ ಕುರಿತು ವಾದಿಯರ ಪರ ವಕೀಲರು ಸಲ್ಲಿಸಿರುವಂತಹ ದಾಖಲಾತಿಗಳ ಹಿನ್ನಲೆಯಲ್ಲಿ ಪರಿಶೀಲಿಸಲಾಗಿ, ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 110/1 ಬಿ, 110/1 ಎ ಕ್ರಮವಾಗಿ ಮೂಡಲಗಿರಿಯಪ್ಪ ಬಿನ್ ಸಂಣಪ್ಪ ಹಾಗೂ ಸಿದ್ದಪ್ಪ ಬಿನ್ ಸಂಣಪ್ಪರವರ ಹೆಸರಿನಲ್ಲಿ ಖಾತೆ ನಮೂದು ಇರುವುದು ಕಂಡುಬರುತ್ತದೆ. ಅಂತೆಯೆ ದಾವಾ ಸ್ವತ್ತಿನ ಕುರಿತು ಕೂಡ 1969-70 ನೇ ಸಾಲಿನವರೆಗೂ ಸಿದ್ದಪ್ಪ ಬಿನ್ ಸಣ್ಣಪ್ಪರವರ ಹೆಸರಿನಲ್ಲಿ 28 ಗುಂಟೆ ಹಾಗೂ ಮೂಡಲ ಗಿರಿಯಪ್ಪರವರ ಹೆಸರಿನಲ್ಲಿ 27 ಗುಂಟೆ ಸ್ವತ್ತಿನ ಕುರಿತು ವ್ಯವಸಾಯಗಾರರಾಗಿ ಸಾಗುವಳಿ ಮಾಡುತ್ತಿದ್ದರು ಎಂಬುದರ ಕುರಿತು ಕಂಡುಬರುತ್ತದೆ. ಹಾಗಾಗಿ ವಾದಿಯರು ಹಾಜರುಪಡಿಸಿರುವಂತಹ ದಿನಾಂಕ 04.03.1941 ರ ನೋಂದಣಿ ಯಾಗದ ವಿಭಾಗಪತ್ರದ ಕುರಿತು ಹಾಗೂ ಪಹಣಿಗಳಲ್ಲಿನ ಉಲ್ಲೇಖಗಳ ಕುರಿತು ಪರಿಗಣಿಸುವಂತಹ ಅಂಶಗಳು ಕಂಡುಬರುತ್ತವೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 110/5 ರ 1965-66 ನೇ ಸಾಲಿನಿಂದ 1999-2000 ನೇ ಸಾಲಿನ ವರೆಗಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅದರಂತೆ 1 ಎಕರೆ, 15 ಗುಂಟೆ ಸ್ವತ್ತಿನ ಕುರಿತು ಸಿದ್ದಪ್ಪ ಬಿನ್ ಸಂಣಪ್ಪರವರ ಹೆಸರಿನಲ್ಲಿ ಖಾತೆ ನಮೂದಾಗಿದ್ದು, ಸ್ವಾಧೀನದಾರರು ಎಂಬಲ್ಲಿ, ಖುದ್ದು 28 ಗುಂಟೆ ಎಂದು ಹಾಗೂ ಮೂಡಲಗಿರಿಯಪ್ಪರವರ ಹೆಸರಿನಲ್ಲಿ 27 ಗುಂಟೆ ಸ್ವತ್ತಿನ ಕುರಿತು ನಮೂದು ಇರುವುದು ಕಂಡುಬರುತ್ತದೆ. ಆನಂತರದಲ್ಲಿ ಸಂಪೂರ್ಣ 1 ಎಕರೆ, 15 ಗುಂಟೆ ಸ್ವತ್ತಿನ ಕುರಿತು ಕರಿಯಪ್ಪ ಬಿನ್ ಸಿದ್ದಪ್ಪ ಮತ್ತು ಬಸಪ್ಪ ಬಿನ್ ಸಿದ್ದಪ್ಪರವರ ಹೆಸರಿನಲ್ಲಿ ಎಂ.ಆರ್.28/1972 ರಂತೆ ಖಾತೆ ಏರ್ಪಟ್ಟಿರುವುದು ಕಂಡುಬರುತ್ತದೆ. ಆನಂತರ ದಲ್ಲಿ1985-86 ನೇ ಸಾಲಿನಿಂದ 1988-89 ನೇ ಸಾಲಿನವರೆಗೆ ಖಾತೆದಾರರು ಎಂಬಲ್ಲಿ, ಸಿದ್ದಪ್ಪ ಬಿನ್ ಸಣ್ಣಪ್ಪ ಎಂದು ಹಾಗೂ

ವ್ಯವಸಾಯಗಾರರು ಎಂಬಲ್ಲಿ ಮೂಡಲಗಿರಿಯಪ್ಪ ಎಂದು ನಮೂದು ಇರುವುದು ಕಂಡುಬರುತ್ತದೆ. ಅಂತೆಯೆ ಸರ್ವೇ ನಂಃ 110/5 ರ 2001-02, 2010-11, 2019-20 ನೇ ಸಾಲಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅದರಂತೆ 1 ಎಕರೆ, 15 ಗುಂಟೆ ಸ್ವತ್ತಿನ ಕುರಿತು ಸಿದ್ದಪ್ಪ ಬಿನ್ ಸಣ್ಣಪ್ಪರವರ ಹೆಸರಿನಲ್ಲಿ ಖಾತೆ ನಮೂದು ಇರುವುದು ಕಂಡುಬರುತ್ತದೆ. ಅಂತೆಯೆ ಸರ್ವೇ ನಂಃ 110/5 ರ 2022-23 ನೇ ಸಾಲಿನ ಪಹಣಿಯನ್ನು ಹಾಜರು ಪಡಿಸಿದ್ದು, ಅದರಂತೆ 1 ಎಕರೆ, 15 ಗುಂಟೆ ಸ್ವತ್ತಿನ ಕುರಿತು ಎಂ.ಆರ್.ಹೆಚ್. 49/22021-22 ರ ಪೌತಿ ಮೇರೆಗೆ ಪ್ರತಿವಾದಿಯರ ಹೆಸರಿನಲ್ಲಿ ಖಾತೆ ನಮೂದು ಇರುವುದು ಕಂಡುಬರುತ್ತದೆ. ಈ ಮೇಲ್ಕಂಡಂತೆ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂದಿಸಿದಂತೆ ಹಾಜರುಪಡಿಸಿರುವಂತಹ ದಾಖಲಾತಿಗಳ ಕುರಿತು ಪರಿಶೀಲಿಸಲಾಗಿ, ದಾವಾ ಅನುಸೂಚಿತ ಸ್ವತ್ತು ಮೂಲತಃ ಸಿದ್ದಪ್ಪ ಬಿನ್ ಸಂಣಪ್ಪ ಹಾಗೂ ಮೂಡಲ ಗಿರಿಯಪ್ಪರವರು ಸ್ವಾಧೀನಾನುಭವವನ್ನು ಹೊಂದಿದ್ದರು ಎಂಬುದರ ಕುರಿತು ಪರಿಗಣಿ ಸಬಹುದಾದ ಅಂಶಗಳು ಕಂಡುಬರುತ್ತವೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಹಾಗಾಗಿ ಈ ದಾಖಲಾತಿಗಳು ಕೂಡ ದಾವೆಯ ಕುರಿತಾಗಿ ವಾದಿಯರು ಮೇಲ್ನೋಟಕ್ಕೆ ಸಾಭೀತು ಪಡಿಸಬಹುದಾದ ಪ್ರಕರಣವನ್ನು ಹೊಂದಿರುತ್ತಾರೆ ಎಂಬುದನ್ನು ಪರಿಗಣಿಸಲು ಪೂರಕವಾಗಿರುತ್ತವೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ148, 147 ರ 2022-23 ನೇ ಸಾಲಿನ ಪಹಣಿ ಗಳನ್ನು ಹಾಜರುಪಡಿಸಿದ್ದು, ಅದರಂತೆ ಸದರಿ ಸ್ವತ್ತುಗಳ ಖಾತೆಯು ಪ್ರತಿವಾದಿಯರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 23/1 ರ ಕುರಿತಾಗಿ 1965-66 ನೇ ಸಾಲಿನಿಂದ 1979-80 ನೇ ಸಾಲಿನ ವರೆಗಿನ ಪಹಣಿಗಳನ್ನು ಹಾಜರು ಪಡಿಸಿದ್ದು, ಅದರಂತೆ ಸದರಿ ಸ್ವತ್ತುಗಳ ಖಾತೆಯು ಪ್ರಾರಂಭಿಕ ಹಂತದಲ್ಲಿ ಸಿದ್ದಪ್ಪ ಬಿನ್ ಸಂಣಪ್ಪರವರ ಹೆಸರಿನಲ್ಲಿ ನಮೂದು ಇದ್ದು, ಆನಂತರದಲ್ಲಿ ಪಾಲು ವಿಭಾಗದಂತೆ ಕರಿಯಪ್ಪ ಬಿನ್ ಸಿದ್ದಪ್ಪ ಮತ್ತು ಬಸಪ್ಪ ಬಿನ್ ಸಿದ್ದಪ್ಪರವರ ಹೆಸರಿನಲ್ಲಿ ಖಾತೆ ಏರ್ಪಟ್ಟಿರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ

98/3 ಎ ರ ಕುರಿತಾಗಿ 1965-66 ನೇ ಸಾಲಿನಿಂದ 1979-80 ನೇ ಸಾಲಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅದರಂತೆ ಸದರಿ ಸ್ವತ್ತಿನ ಖಾತೆಯು ಪ್ರಾರಂಭಿಕ ಹಂತದಲ್ಲಿ ಸಿದ್ದಪ್ಪ ಬಿನ್ ಸಣ್ಣಪ್ಪರವರ ಹೆಸರಿನಲ್ಲಿ ನಮೂದು ಇದ್ದು, ಆನಂತರದಲ್ಲಿ ಪರಿವರ್ತನಪತ್ರದ ಆದಾರದಲ್ಲಿ ಎಂ.ಜಿ. ಮಹಾದೇವಪ್ಪ ಬಿನ್ ಗಿರಿಮಲ್ಲಪ್ಪರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 110/1 ಬಿ ಗೆ ಸಂಬಂಧಿಸಿದಂತೆ 1965-66 ನೇ ಸಾಲಿನಿಂದ 1979-80 ನೇ ಸಾಲಿನ ವರೆಗಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅದರಂತೆ 37 ಗುಂಟೆ ವಿಸ್ತೀರ್ಣದ ಸ್ವತ್ತಿನ ಖಾತೆಯು ಮೂಡಲಗಿರಿಯಪ್ಪ ಬಿನ್ ಸಂಣಪ್ಪರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 110/1 ಎ ಗೆ ಸಂಬಂಧಿಸಿದಂತೆ 1965-66 ನೇ ಸಾಲಿನಿಂದ 1979-80 ನೇ ಸಾಲಿನವರೆಗಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅದರಂತೆ 4 ಎಕರೆ 10 ಗುಂಟೆ ಸ್ವತ್ತಿನ ಖಾತೆಯು ಪಾಲು ವಿಭಾಗದಂತೆ ಕರಿಯಪ್ಪ ಬಿನ್ ಸಿದ್ದಪ್ಪ ಮತ್ತು ಬಸಪ್ಪ ಬಿನ್ ಸಿದ್ದಪ್ಪರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದ 1965-66 ನೇ ಸಾಲಿನ 1979-80 ನೇ ಸಾಲಿನ ಪಹಣಿಗಳನ್ನು ಹಾಜರುಪಡಿಸಿದ್ದು ಅದರಂತೆ 1965-66 ರಿಂದ 1968-69 ರ ಪಹಣಿಗಳಲ್ಲಿ 1 ಎಕರೆ 15 ಗುಂಟೆ ಸ್ವತ್ತಿನ ಖಾತೆಯು ಸಿದ್ದಪ್ಪ ಬಿನ್ ಸಂಣಪ್ಪರವರ ಹೆಸರಿನಲ್ಲಿ ನಮೂದು ಇದ್ದ, ವ್ಯವಸಾಯಗಾರರು ಎಂಬಲ್ಲಿ ಸದರಿರವರ ಹೆಸರಿನಲ್ಲಿ 28 ಗುಂಟೆ ಸ್ವತ್ತಿನ ಕುರಿತು ಉಳಿಕೆ 27 ಗುಂಟೆ ಸ್ವತ್ತಿನ ಕುರಿತು ಮೂಡಲ ಗಿರಿಯಪ್ಪರವರ ಹೆಸರನಲ್ಲಿ ನಮೂದು ಇರುವುದು ಕಂಡುಬರುತ್ತದೆ. ಆನಂತರದಲ್ಲಿ ಎಂ.ಆರ್.28 ರಂತೆ ದಿನಾಂಕ 28.02.1972 ರ ವಿಭಾಗದಂತೆ ಕರಿಯಪ್ಪ ಬಿನ್ ಸಿದ್ದಪ್ಪ ಮತ್ತು ಬಸಪ್ಪ ಬಿನ್ ಸಿದ್ದಪ್ಪರವರ ಹೆಸರಿನಲ್ಲಿ ತಲಾ 28 ಗುಂಟೆ ಸ್ವತ್ತಿನ ಕುರಿತು ಖಾತೆ ನಮೂದು ಇರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 110/1 ಬಿ ಗೆ ಸಂಬಂಧಿಸಿದಂತೆ 2017-18 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಂತೆ 37 ಗುಂಟೆ ಸ್ವತ್ತಿನ ಖಾತೆಯು ಸಣ್ಣಪ್ಪ ಬಿನ್ ಮೂಡಲ

ಗಿರಿಯಪ್ಪ ಮತ್ತು ಮಲ್ಲೇಶಪ್ಪ ಬಿನ್ ಮೂಡಲಗಿರಿಯಪ್ಪರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 67/3 ರ 2016-17 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಂತೆ 1 ಎಕರೆ 25 ಗುಂಟೆ ಸ್ವತ್ತಿನ ಖಾತೆಯು ಸಣ್ಣಪ್ಪ ಬಿನ್ ಮೂಡಲಗಿರಿಯಪ್ಪ ಮತ್ತು ಮಲ್ಲೇಶಪ್ಪ ಬಿನ್ ಮೂಡಲಗಿರಿಯಪ್ಪರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ತುಪ್ಪದಹಳ್ಳಿ ಗ್ರಾಮದ ಸರ್ವೇ 112/1 ಎ ರ 2016-17 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಂತೆ 1 ಎಕರೆ 25 ಗುಂಟೆ ಸ್ವತ್ತಿನ ಖಾತೆಯು ಸಣ್ಣಪ್ಪ ಬಿನ್ ಮೂಡಲಗಿರಿಯಪ್ಪ ಮತ್ತು ಮಲ್ಲೇಶಪ್ಪ ಬಿನ್ ಮೂಡಲಗಿರಿಯಪ್ಪರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ಈ ಮೇಲ್ಕಂಡ ಎಲ್ಲಾ ಪಹಣಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಸದರಿ ಸ್ವತ್ತುಗಳು ಮೂಲತಃ ಸಂಣಪ್ಪರವರ ಮಕ್ಕಳಾದ ಸಿದ್ದಪ್ಪ ಬಿನ್ ಸಂಣಪ್ಪ ಹಾಗೂ ಮೂಡಲಗಿರಿಯಪ್ಪ ಬಿನ್ ಸಂಣಪ್ಪರವರಿಗೆ ಸೇರಿದಂತಹ ಸ್ವತ್ತುಗಳು ಎಂಬುದರ ಕುರಿತು ಪರಿಗಣಿಸಲು ಪೂರಕವಾದ ದಾಖಲಾತಿ ಗಳಾಗಿರುತ್ತವೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

19. ಈ ಮೇಲ್ಕಂಡ ಉಭಯ ಪಕ್ಷಗಾರರ ಹೇಳಿಕೆಗಳು ಮತ್ತು ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಪ್ರತಿವಾದಿಯರು ಪ್ರತಿ ಹಕ್ಕು ದಾವೆಯಲ್ಲಿ ಉಲ್ಲೇಖಿಸಿರುವಂತೆ ತುಪ್ಪದಹಳ್ಳಿ ಗ್ರಾಮದ ಸರ್ವೇ ನಂಃ 110/5 ರ 1 ಎಕರೆ 15 ಗುಂಟೆ ಸ್ವತ್ತು ಪ್ರತಿ ಹಕ್ಕು ದಾವಾ ಸ್ವತ್ತು ಎಂದು ನಿಲುವನ್ನು ತೆಗೆದು ಕೊಂಡಿದ್ದಾಗ್ಯೂ ಕೂಡ, ಸದರಿ ನಿಲುವುಗಳನ್ನು ಮೇಲ್ನೋಟಕ್ಕೆ ರುಜುವಾತು ಪಡಿಸುವಂತಹ ಯಾವುದೇ ದಾಖಲಾತಿಗಳನ್ನು ಕೂಡ ಹಾಜರುಪಡಿಸಿರುವುದಿಲ್ಲ. ಹಾಗಾಗಿ ಪ್ರತಿವಾದಿಯರು ಮಧ್ಯಂತರ ಅರ್ಜಿ ಸಂಖ್ಯೆ-1 ರ ಕುರಿತಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿರುವ ಬಗ್ಗೆ ತಮ್ಮ ಪರವಾಗಿ ಮೇಲ್ನೋಟಕ್ಕೆ ಸಾಬೀತು ಪಡಿಸಬಹುದಾದ ಪ್ರಕರಣವನ್ನು ಹೊಂದಿರುವುದಿಲ್ಲ ಎಂಬುದು ಉಭಯ ಪಕ್ಷಗಾರರು ಹಾಜರುಪಡಿಸಿರುವಂತಹ ದಾಖಲಾತಿಗಳಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಪ್ರತಿವಾದಿ

ಯರು ಈ ದಾವೆಯಲ್ಲಿ ಅನುಕೂಲತೆಯ ಒಲುಮೆಯನ್ನು ತನ್ನ ಪರವಾಗಿ ಹೊಂದಿರುತ್ತಾರೆಯೇ ಎಂಬುದರ ಕುರಿತು ಪರಿಶೀಲಿಸಲಾಗಿ, ವಾದಿಯರ ಪರವಾಗಿ ಹಾಜರು ಪಡಿಸಿರುವಂತಹ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಾದಿಯರ ಪೂರ್ವಜರು ದಾವಾ ಅನುಸೂಚಿತ ಸ್ವತ್ತನ್ನು ನೋಂದಣಿಯಾಗದ ವಿಭಾಗಪತ್ರದಂತೆ ಅರ್ಜಿಸಿರುವ ಕುರಿತು ಹಾಗೂ 1970-71 ರವರೆಗೆ ಸ್ವಾಧೀನತೆಯನ್ನು ಹೊಂದಿರುವ ಕುರಿತು ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ಹಾಗಾಗಿ ಮಧ್ಯಂತರ ಅರ್ಜಿ ಸಂಖ್ಯೆ-1 ರ ಕುರಿತಾಗಿ ಅನುಕೂಲತೆಯ ಒಲುಮೆ ಪ್ರತಿವಾದಿಯರ ಪರವಾಗಿ ಇರುವುದಿಲ್ಲವೆಂದು, ಬದಲಾಗಿ ವಾದಿಯರ ಪರವಾಗಿ ಇರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಪ್ರಸ್ತುತ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ, ಪ್ರತಿವಾದಿಯರಿಗೆ ತುಂಬಲಾರದ ಹಾನಿ ಉಂಟಾಗುತ್ತದೆಯೇ ಎಂಬುದರ ಕುರಿತು ಪರಿಶೀಲಿಸಲಾಗಿ, ಪ್ರತಿ ಹಕ್ಕು ಅನುಸೂಚಿತ ಸ್ವತ್ತಿನ ಭೌತಿಕ ಅಸ್ತಿತ್ವದ ಕುರಿತು ನಿರ್ಣಯಿಸುವಂತಹ ದಾಖಲಾತಿಗಳು ಲಭ್ಯತೆ ಇಲ್ಲದ ಕಾರಣ, ಈ ಹಂತದಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ನೀಡಿದ್ದಲ್ಲಿ, ಪ್ರತಿವಾದಿಯರು ಸದರಿ ಸ್ವತ್ತಿನಲ್ಲಿ ನಿರ್ಮಿತಿ ಕಾರ್ಯ ಹಾಗೂ ಇತರೆ ಕಾರ್ಯಗಳನ್ನು ನಿರ್ವಹಿಸಿದ್ದಲ್ಲಿ, ವಾದಿಯರಿಗೆ ಹಾನಿ ಉಂಟಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಹಾಗಾಗಿ ದಾವಾ ಅನುಸೂಚಿತ ಸ್ವತ್ತು ಮತ್ತು ಪ್ರತಿ ಹಕ್ಕು ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಉಭಯ ಪಕ್ಷಗಾರರು ಸಲ್ಲಿಸಿರುವಂತಹ ಮದ್ಯಂತರ ಅರ್ಜಿಗಳನ್ನು ತಿರಸ್ಕರಿಸಿ, ಆದೇಶಿಸಿರುವುದರಿಂದ ಪ್ರತಿವಾದಿಯರಿಗೆ ಯಾವುದೇ ಹಾನಿ ಉಂಟಾಗುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ. ಆದ್ದರಿಂದ ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ವಿಚಾರಣಾ ನ್ಯಾಯಾಲಯವು ಮಧ್ಯಂತರ ಅರ್ಜಿ ಸಂಖ್ಯೆ-1 ರ ಕುರಿತು ಪ್ರತಿ ಹಕ್ಕು ದಾವೆಯ ಸ್ವತ್ತಿನ ಬಗ್ಗೆ ಮತ್ತು ದಾವಾ ಅನುಸೂಚಿತ ಸ್ವತ್ತಿನ ಬಗ್ಗೆ ತಿರಸ್ಕರಿಸಿ, ಆದೇಶಿಸಿರುವುದು ಕಾನೂನಾತ್ಮಕವಾಗಿ ಇರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ವಿಚಾರಣಾ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಿ, ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸುವಂತಹ ಯಾವುದೇ ಅಂಶಗಳನ್ನು ಕೂಡ ಪ್ರತಿವಾದಿ

ಯರು ರುಜುವಾತುಪಡಿಸಿರುವುದಿಲ್ಲ. ಅದಕ್ಕೆ ಪ್ರತಿಯಾಗಿ ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ಮಧ್ಯಂತರ ಅರ್ಜಿ ಸಂಖ್ಯೆ-1 ರ ಕುರಿತು ಪ್ರತಿವಾದಿ ಯರು ಮೇಲ್ನೋಟಕ್ಕೆ ಸಾಬೀತುಪಡಿಸಬಹುದಾದ ಪ್ರಕರಣವನ್ನು ಹೊಂದಿರುತ್ತಾರೆ ಎಂಬುದನ್ನು ಹಾಗೂ ಅನುಕೂಲತೆಯ ಒಲುಮೆ ತನ್ನ ಪರವಾಗಿ ಇದೆ ಎಂಬುದನ್ನು ರುಜುವಾತುಪಡಿಸಲು ವಿಫಲರಾಗಿರುವುದು ಕಂಡು ಬರುತ್ತದೆ. ಆದಾಗ್ಯೂ ವಾದಿಯರು ಮಧ್ಯಂತರ ಅರ್ಜಿ ಸಂಖ್ಯೆ-2 ರ ಕುರಿತು ಮೇಲ್ಮನವಿಯನ್ನು ಸಲ್ಲಿಸದ ಕಾರಣ ಹಾಗೂ ಈ ಮೇಲ್ಮನವಿಯಲ್ಲಿ ಆಕ್ಷೇಪಣಾ ತಕರಾರನ್ನು ಸಲ್ಲಿಸದ ಕಾರಣ, ವಿಚಾರಣಾ ನ್ಯಾಯಾಲಯದ ಆದೇಶದ ಕುರಿತು ಸ್ಥಿರೀಕರಿಸುವುದು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಸೂಕ್ತವೆಂದು ತೀರ್ಮಾನಕ್ಕೆ ಬರಲಾಗುತ್ತದೆ. ಆದ್ದರಿಂದ ಈ ಮೇಲ್ಕಂಡ ಅಂಶ-1 ಮತ್ತು 2 ನ್ನು ನಕಾರಾತ್ಮಕವೆಂದು ನಿರ್ಣಯಿಸಲಾಗಿದೆ.

**20.** **<u>ಅಂಶ ಸಂಖ್ಯೆ-3:-</u>** ಈ ಮೇಲ್ಕಂಡಂತೆ ಅಂಶ ಸಂಖ್ಯೆ-1 ಮತ್ತು 2 ನ್ನು ನಿರ್ಣಯಿಸಲಾಗಿ, ಈ ಕೆಳಕಂಡಂತೆ ಆದೇಶಿಸಲಾಗುತ್ತದೆಃ-

## ಆದೇಶ

ಹೊಳಲ್ಕೆರೆಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ಅಸಲು ದಾವಾ ಸಂಖ್ಯೆ-280/2022 ರ ದಿನಾಂಕ 18.04.2023 ರ ಮಧ್ಯಂತರ ಅರ್ಜಿ ಸಂಖ್ಯೆ-1 ರ ಆದೇಶ ವಿರುದ್ಧ ಮೇಲ್ಮನವಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 43 ನಿಯಮ 1 ಸಹವಾಚಕ 151 ರ ಅಡಿಯಲ್ಲಿ ಸಲ್ಲಿಸಿದಂತಹ ಮೇಲ್ಮನವಿಯನ್ನು ತಿರಸ್ಕರಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ.

ಹೊಳಲ್ಕೆರೆಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ಅಸಲು ದಾವಾ ಸಂಖ್ಯೆ-

280/2022 ರಲ್ಲಿ ಪ್ರತಿವಾದಿಯರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದ್ದಂತಹ ಮಧ್ಯಂತರ ಅರ್ಜಿ ಸಂಖ್ಯೆ-1 ರ ಕುರಿತಾದ ದಿನಾಂಕ 18.04.2023 ರ ಆದೇಶವನ್ನು ಸ್ಥಿರೀಕರಿಸಲಾಗಿದೆ.

ಈ ತೀರ್ಪಿನ ನಕಲನ್ನು ವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸಿಕೊಡತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 14 ನೇ ಜುಲೈ, 2026 ರಂದು ನಾನು ಉದ್ಘೋಷಿಸಿದ್ದೇನೆ.)

RAGHURAMA N S
Digitally signed by RAGHURAMA N S
Date: 2026.07.16 10:41:49 +0530

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.